सत्यमेव जयते

**ಭಾರತ ಸರ್ಕಾರ**

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

# ವಿಮಾ ತಜ್ಞರ ಅಧಿನಿಯಮ, 2006

**(2006ರ ಅಧಿನಿಯಮ ಸಂಖ್ಯೆ 35)**

[25ನೇ ಏಪ್ರಿಲ್, 2011 ರಂದು ಜಾರಿಯಲ್ಲಿದ್ದಂತೆ]

# THE ACTUARIES ACT, 2006

**(Act No. 35 of 2006)**

[As on 25th April, 2011]

# ಮುನ್ನುಡಿ

25.04.2011 ರಂದು ಜಾರಿಯಲ್ಲಿದ್ದಂತೆ, ದಿ ಆ್ಯಕ್ಚ್ಯುಅರಿಸ್ ಆ್ಯಕ್ಟ್, 2006 (2006ರ 35) –ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 25.04.2011ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 45ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 87 ರಿಂದ 114ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
ನವದೆಹಲಿ — ಕಾರ್ಯದರ್ಶಿ
ದಿನಾಂಕ: — ಭಾರತ ಸರ್ಕಾರ

## PREFACE

This edition of the Actuaries Act, 2006 (35 of 2006) as on the 25.04.2011 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol.45, dated 25.04.2011 on pages 87 to 114.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi — **V.K. BHASIN**
Date : — Secretary,
Government of India

# ವಿಮಾ ತಜ್ಞರ ಅಧಿನಿಯಮ, 2006

## ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು: ಪುಟಗಳು

### ಅಧ್ಯಾಯ –I
### ಪ್ರಾರಂಭಿಕ


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 1
2. ಪರಿಭಾಷೆಗಳು 1


### ಅಧ್ಯಾಯ – II
### ಭಾರತ ವಿಮಾ ತಜ್ಞರ ಸಂಸ್ಥೆ


3. ಸಂಸ್ಥೆಯ ನಿಗಮನ 4
4. ವಿಮಾ ತಜ್ಞರ ಸೊಸೈಟಿಯ ಆಸ್ತಿಗಳು, ಹೊಣೆಗಾರಿಕೆಗಳು, ಮುಂತಾದವುಗಳ ವರ್ಗಾವಣೆ 5
5. ಸಂಸ್ಥೆಯ ಉದ್ದೇಶಗಳು 6
6. ರಿಜಿಸ್ಟರಿನಲ್ಲಿ ಹೆಸರುಗಳ ನಮೂದು 6
7. ಸಹಸದಸ್ಯರು ಮತ್ತು ಅಧಿಸದಸ್ಯರು 8
8. ಗೌರವ, ಸಂಯೋಜಿತ ಮತ್ತು ವಿದ್ಯಾರ್ಥಿ ಸದಸ್ಯರು 8
9. ವೃತ್ತಿ ಪ್ರಮಾಣಪತ್ರ 9
10. ಸದಸ್ಯರನ್ನು ವಿಮಾ ತಜ್ಞರೆಂದು ಕರೆಯುವುದು 9
11. ಅನರ್ಹತೆಗಳು 10
12. ಸಂಸ್ಥೆಯ ಪರಿಷತ್ತಿನ ಸಂರಚನೆ 11
13. ವಾರ್ಷಿಕ ಸರ್ವ ಸದಸ್ಯರ ಸಭೆಗಳು 13
14. ಪರಿಷತ್ತಿಗೆ ಮರು ಚುನಾವಣೆ 13
15. ಚುನಾವಣೆಗೆ ಸಂಬಂಧಪಟ್ಟ ವಿವಾದಗಳ ಇತ್ಯರ್ಥ 13
16. ನ್ಯಾಯಾಧಿಕರಣದ ಸ್ಥಾಪನೆ 14
17. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಗೌರವ ಕಾರ್ಯದರ್ಶಿ 15
18. ಸದಸ್ಯತ್ವಕ್ಕೆ ರಾಜೀನಾಮೆ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳನ್ನು ತುಂಬುವುದು 15
19. ಪರಿಷತ್ತಿನ ಪ್ರಕಾರ್ಯಗಳು 16
20. ಸಿಬ್ಬಂದಿ ವರ್ಗ, ಪರಿಶ್ರಮಧನ ಮತ್ತು ಭತ್ಯೆಗಳು 18
21. ಪರಿಷತ್ತಿನ ಸಮಿತಿಗಳು 19
22. ಪರಿಷತ್ತಿನ ಹಣಕಾಸು 20

## ಅಧ್ಯಾಯ –III
## ಸದಸ್ಯರ ರಿಜಿಸ್ಟರು


23. ರಿಜಿಸ್ಟರು 21
24. ರಿಜಿಸ್ಟರಿನಿಂದ ಹೆಸರನ್ನು ತೆಗೆದುಹಾಕುವುದು 22
25. ರಿಜಿಸ್ಟರಿನಲ್ಲಿ ಪುನಃ ನಮೂದನೆ 22


## ಅಧ್ಯಾಯ–IV
## ದುರ್ನಡತೆ


26. ಶಿಸ್ತು ಸಮಿತಿ 23
27. ಪ್ರಾಸಿಕ್ಯೂಷನ್ ನಿರ್ದೇಶಕರ ನೇಮಕ 23
28. ಪ್ರಾಧಿಕಾರ, ಪರಿಷತ್ತು, ಶಿಸ್ತು ಸಮಿತಿ ಮತ್ತು ಪ್ರಾಸಿಕ್ಯೂಷನ್ ನಿರ್ದೇಶಕನು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುವುದು 23
29. ಶಿಸ್ತು ಸಮಿತಿಯ ವರದಿಯ ಮೇಲೆ ಪರಿಷತ್ತು ಕ್ರಮಕೈಗೊಳ್ಳುವುದು 24
30. ಸದಸ್ಯರಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡುವುದು 24
31. ವೃತ್ತಿ ಸಂಬಂಧಿತ ದುರ್ನಡತೆಯನ್ನು ಅಥವಾ ಇತರ ದುರ್ನಡತೆಯನ್ನು ಪರಿಭಾಷಿಸಲಾಗಿದೆ 25


## ಅಧ್ಯಾಯ –V
## ಅಪೀಲುಗಳು


32. ಅಪೀಲು ಪ್ರಾಧಿಕಾರದ ರಚನೆ 25
33. ಪ್ರಾಧಿಕಾರದ ಸದಸ್ಯರ ಪದಾವಧಿ 25
34. ಪ್ರಾಧಿಕಾರದ ಸದಸ್ಯರ ಭತ್ಯೆಗಳು, ಸೇವಾ ಷರತ್ತುಗಳು ಮತ್ತು ಅದರ ಕಾರ್ಯವಿಧಾನ, ಇತ್ಯಾದಿ 26
35. ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿ 26
36. ಪ್ರಾಧಿಕಾರಕ್ಕೆ ಅಪೀಲು 26


## ಅಧ್ಯಾಯ –VI
## ದಂಡನೆಗಳು


37. ಸದಸ್ಯನೆಂದು ಸುಳ್ಳು ಕ್ಲೇಮು ಮಾಡುವುದು, ಇತ್ಯಾದಿಗೆ ದಂಡನೆ 27
38. ಸಂಸ್ಥೆಯ ಹೆಸರನ್ನು ಬಳಸುವುದು, ವಿಮಾ ತಜ್ಞತೆ ವಿಜ್ಞಾನದ ಪದವಿಯನ್ನು ನೀಡುವುದು, ಇತ್ಯಾದಿಗಳಿಗೆ ದಂಡನೆ 28
39. ಕಂಪನಿಗಳು ವಿಮಾ ತಜ್ಞತೆ ವೃತ್ತಿಯಲ್ಲಿ ತೊಡಗಬಾರದು 29
40. ಅನರ್ಹ ವ್ಯಕ್ತಿಯು ದಸ್ತಾವೇಜುಗಳಿಗೆ ಸಹಿ ಹಾಕಬಾರದು 29
41. ಕಂಪನಿಗಳಿಂದ ಅಪರಾಧಗಳು 29
42. ಪ್ರಾಸಿಕ್ಯೂಷನ್ನಿಗೆ ಅನುಮೋದನೆ 30

## ಅಧ್ಯಾಯ –VII
## ಗುಣಮಟ್ಟ ಪರಿಶೀಲನಾ ಮಂಡಳಿ


| | | |
|---|---|---|
| 43. | ಗುಣಮಟ್ಟ ಪರಿಶೀಲನಾ ಮಂಡಳಿಯ ಸ್ಥಾಪನೆ | 30 |
| 44. | ಮಂಡಳಿಯ ಪ್ರಕಾರ್ಯಗಳು | 31 |
| 45. | ಮಂಡಲಿಯ ಪ್ರಕ್ರಿಯೆ | 31 |
| 46. | ಮಂಡಳಿಯ ಪೀಠಾಧ್ಯಕ್ಷನ ಮತ್ತು ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು | 31 |
| 47. | ಮಂಡಳಿಯ ವೆಚ್ಚ | 31 |


## ಅಧ್ಯಾಯ –VIII
## ಸೊಸೈಟಿಗಳ ನೋಂದಣಿ ಅಧಿನಿಯಮದ ಮೇರೆಗೆ ನೋಂದಾಯಿತವಾದ ಭಾರತದ ವಿಮಾ ತಜ್ಞರ ಸೊಸೈಟಿಯ ವಿಸರ್ಜನೆ


| | | |
|---|---|---|
| 48. | ಭಾರತದ ವಿಮಾ ತಜ್ಞರ ಸೊಸೈಟಿಯ ವಿಸರ್ಜನೆ | 31 |
| 49. | ವಿಸರ್ಜಿತ ಸೊಸೈಟಿಯ ನೌಕರರಿಗೆ ಸಂಬಂಧಿಸಿದ ಉಪಬಂಧಗಳು | 32 |


## ಅಧ್ಯಾಯ –IX
## ಸಂಕೀರ್ಣ


| | | |
|---|---|---|
| 50. | ವಿಮಾ ತಜ್ಞನು ಒಂದಕ್ಕಿಂತ ಹೆಚ್ಚು ಕಚೇರಿಗಳನ್ನು ನಿರ್ವಹಿಸುವುದು | 33 |
| 51. | ಪರಸ್ಪರತೆ | 33 |
| 52. | ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ | 33 |
| 53. | ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ | 34 |
| 54. | ಸದಸ್ಯರು, ಮುಂತಾದವರು ಲೋಕ ನೌಕರರಾಗಿರುವುದು | 34 |
| 55. | ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ | 35 |
| 56. | ವಿನಿಯಮನಗಳನ್ನು ರಚಿಸುವ ಅಧಿಕಾರ | 35 |
| 57. | ವಿನಿಯಮನಗಳನ್ನು ರಚಿಸುವುದಕ್ಕಾಗಿ ಅಥವಾ ತಿದ್ದುಪಡಿ ಮಾಡುವುದಕ್ಕಾಗಿ ನಿರ್ದೇಶನಗಳನ್ನು ಹೊರಡಿಸಲು ಕೇಂದ್ರ ಸರ್ಕಾರದ ಅಧಿಕಾರ | 37 |
| 58. | ನಿಯಮಗಳನ್ನು ಮತ್ತು ವಿನಿಯಮನಗಳನ್ನು ಸಂಸತ್ತಿನ ಮುಂದೆ ಇರಿಸುವುದು | 37 |
| 59. | ತೊಂದರೆಗಳನ್ನು ನಿವಾರಿಸಲು ಅಧಿಕಾರ | 38 |
| | **ಅನುಸೂಚಿ.** | **38** |

# ವಿಮಾ ತಜ್ಞರ ಅಧಿನಿಯಮ, 2006
## (2006ರ ಅಧಿನಿಯಮ ಸಂಖ್ಯೆ 35)

[27ನೇ ಆಗಸ್ಟ್, 2006]

ವಿಮಾ ತಜ್ಞರ ವೃತ್ತಿಯನ್ನು ವಿನಿಯಮಿಸುವುದಕ್ಕಾಗಿ ಮತ್ತು ಅಭಿವೃದ್ಧಿಪಡಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ –I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ವಿಮಾ ತಜ್ಞರ ಅಧಿನಿಯಮ, 2006 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ *ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು:

ಪರಂತು, ಈ ಅಧಿನಿಯಮದ ಬೇರೆಬೇರೆ ಉಪಬಂಧಗಳಿಗೆ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಿದ ಯಾವುದೇ ಅಂಥ ಉಪಬಂಧದಲ್ಲಿನ ಯಾವುದೇ ಉಲ್ಲೇಖವನ್ನು ಆ ಉಪಬಂಧದ ಪ್ರಾರಂಭಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

---

* ದಿನಾಂಕ 10.11.2006 ರಂದು ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ ಎಸ್‌ಓ 1912 (ಇ) ದಿನಾಂಕ 28.11.2006

(ಎ) "ವಿಮಾ ತಜ್ಞ" ಎಂದರೆ ಭವಿಷ್ಯದಲ್ಲಾಗುವ ಆಕಸ್ಮಿಕ ಘಟನೆಗಳ ಪ್ರಸಕ್ತ ಪರಿಣಾಮಗಳನ್ನು ನಿರ್ಧರಿಸುವಲ್ಲಿ ಅಥವಾ ವಿಮೆಯ ಬೇರೆಬೇರೆ ಕ್ಷೇತ್ರಗಳಲ್ಲಿನ ಹಣಕಾಸಿನ ಸ್ವರೂಪವನ್ನು ರೂಪಿಸುವಲ್ಲಿ ಮತ್ತು ನಷ್ಟ ಸಂಭವವನ್ನು ವಿಶ್ಲೇಷಿಸುವ ಅಥವಾ ಆಜೀವ ಹಿತಾಸಕ್ತಿಗಳ ಮತ್ತು ವಿಮಾ ನಷ್ಟ ಸಂಭವದ ಮೌಲ್ಯವನ್ನು ಲೆಕ್ಕ ಹಾಕುವ ಅಥವಾ ಪಾಲಿಸಿಗಳನ್ನು ರೂಪಿಸುವ ಮತ್ತು ಮೌಲ್ಯ ನಿಗದಿಪಡಿಸುವ, ಪ್ರಯೋಗಸಿದ್ಧ ಕೋಷ್ಟಕಗಳನ್ನು ಆಧರಿಸಿ ವಿಮಾ ವ್ಯವಹಾರ, ವಾರ್ಷಿಕ ಕಂತು, ವಿಮೆಗೆ ಸಂಬಂಧಿಸಿದ ಪ್ರಯೋಜನಗಳನ್ನು ಮತ್ತು ನಿವೃತ್ತಿ ವೇತನ ದರಗಳನ್ನು ಲೆಕ್ಕ ಹಾಕುವ, ದರಗಳನ್ನು ಶಿಫಾರಸ್ಸು ಮಾಡುವಲ್ಲಿ ಪರಿಣತನಾದ ವ್ಯಕ್ತಿ ಎಂದು ಅರ್ಥ ಮತ್ತು ಅಂಥ ತಂತ್ರಜ್ಞಾನದಲ್ಲಿ, ತೆರಿಗೆ ದರ ನಿಗದಿಯಲ್ಲಿ, ನೌಕರರ ಪ್ರಯೋಜನಗಳಲ್ಲಿ ಮತ್ತು ಅಂಥ ಇತರ ನಷ್ಟ ಸಂಭವದ ನಿರ್ವಹಣೆಯಲ್ಲಿ ಮತ್ತು ಹೂಡಿಕೆಗಳಲ್ಲಿ ನಿರತನಾಗಿರುವ ಹಾಗೂ ಆ ಸಂಸ್ಥೆಯ ಅಧಿ ಸದಸ್ಯನಾಗಿರುವ ಸಂಖ್ಯಾಶಾಸ್ತ್ರಜ್ಞನನ್ನು ಒಳಗೊಳ್ಳುತ್ತದೆ; ಮತ್ತು "ವಿಮಾ ತಜ್ಞತೆ ವಿಜ್ಞಾನ" ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಬಿ) "ವಿಮಾ ತಜ್ಞರ ಸೊಸೈಟಿ" ಎಂದರೆ ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21) ಮತ್ತು ಮುಂಬಯಿ ಸಾರ್ವಜನಿಕ ನ್ಯಾಸಗಳ ಅಧಿನಿಯಮ, 1950ರ (1950ರ ಮುಂಬಯಿ ಅಧಿನಿಯಮ ಸಂಖ್ಯೆ XXXIX) ಮೇರೆಗೆ ನೋಂದಾಯಿತವಾದ ಭಾರತದ ವಿಮಾ ತಜ್ಞರ ಸೊಸೈಟಿ ಎಂದು ಅರ್ಥ;

(ಸಿ) "ಗೊತ್ತುಪಡಿಸಿದ ದಿನ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಆ ಸಂಸ್ಥೆಯು ರಚಿತವಾದ ದಿನಾಂಕ;

(ಡಿ) "ಪ್ರಾಧಿಕಾರ" ಎಂದರೆ 32ನೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಅಪೀಲು ಪ್ರಾಧಿಕಾರ ಎಂದು ಅರ್ಥ;

(ಇ) "ಮಂಡಲಿ" ಎಂದರೆ 43ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಗುಣಮಟ್ಟ ಪರಿಶೀಲನಾ ಮಂಡಳಿ ಎಂದು ಅರ್ಥ;

(ಎಫ್) "ಪರಿಷತ್ತು" ಎಂದರೆ 12ನೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಸಂಸ್ಥೆಯ ಪರಿಷತ್ತು ಎಂದು ಅರ್ಥ;

(ಜಿ) "ಅಧಿಸದಸ್ಯ" ಎಂದರೆ ಸಂಸ್ಥೆಯ ಅಧಿಸದಸ್ಯ ಎಂದು ಅರ್ಥ;

(ಹೆಚ್) "ಸಂಸ್ಥೆ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿತವಾದ ಭಾರತದ ವಿಮಾ ತಜ್ಞರ ಸಂಸ್ಥೆ ಎಂದು ಅರ್ಥ;

(ಐ) “ಸದಸ್ಯ” ಎಂದರೆ ಸಂಸ್ಥೆಯು ನಿರ್ವಹಿಸಿಕೊಂಡು ಬರುತ್ತಿರುವ ಸದಸ್ಯರ ರಿಜಿಸ್ಟರಿನಲ್ಲಿ ಹೆಸರಿರುವ ವ್ಯಕ್ತಿ;

(ಜೆ) “ನಿಯಮಿಸಿದ” ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಕೆ) “ಅಧ್ಯಕ್ಷ” ಎಂದರೆ ಪರಿಷತ್ತಿನ ಅಧ್ಯಕ್ಷ ಎಂದು ಅರ್ಥ;

(ಎಲ್) “ರಿಜಿಸ್ಟರು” ಎಂದರೆ ಈ ಅಧಿನಿಯಮದ ಮೇರೆಗೆ ಸಂಸ್ಥೆಯು ನಿರ್ವಹಿಸಿಕೊಂಡು ಬರುತ್ತಿರುವ ಸದಸ್ಯರ ರಿಜಿಸ್ಟರು ಎಂದು ಅರ್ಥ;

(ಎಮ್)“ನಿರ್ದಿಷ್ಟಪಡಿಸಿದ” ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಲಾದುದು ಎಂದು ಅರ್ಥ;

(ಎನ್) “ನ್ಯಾಯಾಧಿಕರಣ” ಎಂದರೆ 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಧಿಕರಣ ಎಂದು ಅರ್ಥ;

(ಓ) “ಉಪಾಧ್ಯಕ್ಷ” ಎಂದರೆ ಪರಿಷತ್ತಿನ ಉಪಾಧ್ಯಕ್ಷ ಎಂದು ಅರ್ಥ;

(ಪಿ) “ವರ್ಷ” ಎಂದರೆ ಯಾವುದೇ ವರ್ಷದ ಏಪ್ರಿಲ್ ತಿಂಗಳ 1ನೇ ದಿನದಂದು ಪ್ರಾರಂಭವಾಗುವ ಮತ್ತು ಅದರ ತರುವಾಯದ ವರ್ಷದ ಮಾರ್ಚ್ ತಿಂಗಳ 31ನೇ ದಿನದಂದು ಕೊನೆಯಾಗುವ ಅವಧಿ ಎಂದು ಅರ್ಥ;

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಸಂಸ್ಥೆಯ ಸದಸ್ಯನು, ಕಂಪನಿಯ ಸದಸ್ಯನಾಗಿ ಅಥವಾ ನೌಕರನಾಗಿ ವೃತ್ತಿಯಲ್ಲಿ ವ್ಯಕ್ತಿಗತವಾಗಿ ಅಥವಾ ವಿಮಾ ತಜ್ಞರೊಂದಿಗೆ ಪಾಲುದಾರಿಕೆಯಲ್ಲಿ, ಅವನು, ಸಂಭಾವನೆಯ ರೂಪದಲ್ಲಿ ಪ್ರತಿಫಲವನ್ನು ಪಡೆದಿರಲಿ ಅಥವಾ ಪಡೆಯದಿರಲಿ ಅಥವಾ ಪಡೆಯಬೇಕಾಗಿರಲಿ ಅಥವಾ ಇಲ್ಲದಿರಲಿ,-

(i) ವಿಮಾ ತಜ್ಞ ವೃತ್ತಿಗೆ ತನ್ನನ್ನು ತೊಡಗಿಸಿಕೊಂಡಾಗ; ಅಥವಾ

(ii) ವಿಮೆ, ನಿವೃತ್ತಿವೇತನ, ಬಂಡವಾಳ ಹೂಡಿಕೆ, ಹಣಕಾಸು ಮತ್ತು ವ್ಯವಸ್ಥಾಪನೆಯ ಕ್ಷೇತ್ರದಲ್ಲಿ ವಿಮಾ ತಜ್ಞತೆ ತಾಂತ್ರಿಕತೆಗಳು ಅನ್ವಯವಾಗುವುದನ್ನು ಒಳಗೊಂಡಿರುವ ಸೇವೆಗಳನ್ನು ನಿರ್ವಹಿಸಲು ಪ್ರಸ್ತಾಪಿಸಿದಾಗ ಅಥವಾ ನಿರ್ವಹಿಸಿದಾಗ; ಅಥವಾ

(iii) ಪರಿಷತ್ತಿನ ಅಭಿಪ್ರಾಯದಲ್ಲಿ, ವೃತ್ತಿಯಲ್ಲಿರುವ ವಿಮಾ ತಜ್ಞನು ಸಲ್ಲಿಸುತ್ತಿರುವಂಥ ಅಥವಾ ಸಲ್ಲಿಸಬಹುದಾದಂಥ ಇತರ ಸೇವೆಗಳನ್ನು ಸಲ್ಲಿಸಿದಾಗ; ಅಥವಾ

(iv) ಮೇಲಿನ (i), (ii) ಮತ್ತು (iii) ನೇ ಖಂಡಗಳಲ್ಲಿ ಸೂಚಿಸಿದ ಒಂದು ಅಥವಾ ಹೆಚ್ಚಿನ ಕಾರ್ಯಚಟುವಟಿಕೆಗಳಲ್ಲಿ ತೊಡಗಿದ ವ್ಯಕ್ತಿಯ ಅಧೀನದಲ್ಲಿ ನಿಯೋಜಿತನಾದಾಗ

– ಅವನನ್ನು "ವೃತ್ತಿ ನಿರತ" ಎಂದು ಭಾವಿಸತಕ್ಕದ್ದು,

ಮತ್ತು "ವೃತ್ತಿ ನಿರತ" ಎಂಬ ಪದಗಳನ್ನು ಅದರ ವ್ಯಾಕರಣ ವ್ಯತ್ಯಾಸಗಳು ಹಾಗೂ ಸಜಾತೀಯ ಪದಾವಳಿಗಳೊಂದಿಗೆ ತದನುಸಾರವಾಗಿ ಅರ್ಥೈಸತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಕಂಪನಿ" ಎಂಬ ಪದಾವಳಿಯು ಕಂಪನಿಗಳ ಅಧಿನಿಯಮ, 1956 (1956ರ 1) ರ 4ಎ ಪ್ರಕರಣದಲ್ಲಿ ಪರಿಭಾಷಿಸಿದಂಥ ಸಾರ್ವಜನಿಕ ಹಣಕಾಸು ಸಂಸ್ಥೆಯನ್ನು ಒಳಗೊಳ್ಳುತ್ತದೆ.

## ಅಧ್ಯಾಯ – II
## ಭಾರತ ವಿಮಾ ತಜ್ಞರ ಸಂಸ್ಥೆ

**3. ಸಂಸ್ಥೆಯ ನಿಗಮನ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಪ್ರಾರಂಭದಲ್ಲಿ ವಿಮಾ ತಜ್ಞರ ಸೊಸೈಟಿಯ ರಿಜಿಸ್ಟರಿನಲ್ಲಿ ಯಾರ ಹೆಸರುಗಳನ್ನು ನಮೂದಿಸಲಾಗಿದೆಯೋ ಆ ಎಲ್ಲಾ ವ್ಯಕ್ತಿಗಳು ಮತ್ತು ಈ ಅಧಿನಿಯಮದ ಮೇರೆಗೆ ನಿರ್ವಹಿಸಿಕೊಂಡು ಬರುತ್ತಿರುವ ರಿಜಿಸ್ಟರಿನಲ್ಲಿ ತಮ್ಮ ಹೆಸರುಗಳನ್ನು ಯಾರು ತದನಂತರ ನಮೂದಿಸಿಕೊಂಡಿದ್ದಾರೋ ಆ ಎಲ್ಲಾ ವ್ಯಕ್ತಿಗಳು ರಿಜಿಸ್ಟರಿನಲ್ಲಿ ತಮ್ಮ ಹೆಸರುಗಳನ್ನು ಎಲ್ಲಿಯವರೆಗೆ ಮುಂದುವರಿಸುವರೋ, ಅಲ್ಲಿಯವರಗೆ ಭಾರತ ವಿಮಾ ತಜ್ಞರ ಸಂಸ್ಥೆ ಎಂಬ ಹೆಸರಿನಿಂದ ಈ ಮೂಲಕ ಒಂದು ನಿಗಮಿತ ನಿಕಾಯವಾಗಿರುತ್ತಾರೆ ಮತ್ತು ಅಂಥ ಎಲ್ಲಾ ವ್ಯಕ್ತಿಗಳನ್ನು ಆ ಸಂಸ್ಥೆಯ ಸದಸ್ಯರುಗಳೆಂದು ತಿಳಿಯತಕ್ಕದ್ದು.

(2) ಸಂಸ್ಥೆಯು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಚರ ಹಾಗೂ ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದು ಆ ಹೆಸರಿನಿಂದ ದಾವೆ ಹೂಡತಕ್ಕದ್ದು ಅಥವಾ ದಾವೆಗೆ ಗುರಿಯಾಗತಕ್ಕದ್ದು.

(3) ಸಂಸ್ಥೆಯ ಪ್ರಧಾನ ಕಚೇರಿಯು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಸ್ಥಳದಲ್ಲಿರತಕ್ಕದ್ದು.

**4. ವಿಮಾ ತಜ್ಞರ ಸೊಸೈಟಿಯ ಆಸ್ತಿಗಳು, ಹೊಣೆಗಾರಿಕೆಗಳು, ಮುಂತಾದವುಗಳ ವರ್ಗಾವಣೆ.–** ಗೊತ್ತುಪಡಿಸಲಾದ ದಿನಾಂಕದಂದು,–

(ಎ) ವಿಮಾ ತಜ್ಞರ ಸೊಸೈಟಿಯ ಎಲ್ಲಾ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಸಂಸ್ಥೆಗೆ ವರ್ಗಾವಣೆಯಾಗತಕ್ಕದ್ದು ಮತ್ತು ಸಂಸ್ಥೆಯಲ್ಲಿ ನಿಹಿತವಾಗತಕ್ಕದ್ದು.

**ವಿವರಣೆ.–** ವಿಮಾ ತಜ್ಞರ ಸೊಸೈಟಿಯ ಆಸ್ತಿಗಳು, ಸದರಿ ಸೊಸೈಟಿಯ ಎಲ್ಲಾ ಹಕ್ಕುಗಳನ್ನು ಮತ್ತು ಅಧಿಕಾರಗಳನ್ನು ಮತ್ತು ವಿಶೇಷವಾಗಿ, ನಗದು ಶಿಲ್ಕುಗಳು, ಠೇವಣಿಗಳು ಮತ್ತು ಎಲ್ಲಾ ಇತರ ಹಿತಾಸಕ್ತಿಗಳೂ ಒಳಗೊಂಡಂತೆ ಎಲ್ಲ ಸ್ವತ್ತುಗಳನ್ನು ಅವು ಚರ ಸ್ವತ್ತಾಗಿರಲಿ ಅಥವಾ ಸ್ಥಿರ ಸ್ವತ್ತಾಗಿರಲಿ ಮತ್ತು ಸದರಿ ಸೊಸೈಟಿಯ ಸ್ವಾಧೀನದಲ್ಲಿರಬಹುದಾದಂಥ ಸ್ವತ್ತುಗಳಲ್ಲಿನ ಅಥವಾ ಸ್ವತ್ತುಗಳಿಂದ ಪ್ರಾಪ್ತವಾಗುವ ಎಲ್ಲಾ ಇತರ ಹಿತಾಸಕ್ತಿಗಳನ್ನು ಮತ್ತು ಹಕ್ಕುಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲಾ ಲೆಕ್ಕಪುಸ್ತಕಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಒಳಗೊಂಡಿದೆಯೆಂದು ಭಾವಿಸತಕ್ಕದ್ದು; ಮತ್ತು ಹೊಣೆಗಾರಿಕೆಗಳು, ಯಾವುದೇ ಬಗೆಯ ಎಲ್ಲಾ ಋಣಗಳನ್ನು, ಹೊಣೆಗಾರಿಕೆಗಳನ್ನು ಹಾಗೂ ಬಾಧ್ಯತೆಗಳನ್ನು ಒಳಗೊಂಡಿರುವುದಾಗಿ ಭಾವಿಸತಕ್ಕದ್ದು;

(ಬಿ) (ಎ) ಖಂಡದ ಉಪಬಂಧಗಳಿಗೆ ಬಾಧಕವಾಗದಂತೆ, ಆ ದಿನದ ನಿಕಟಪೂರ್ವದಲ್ಲಿ ವಿಮಾ ತಜ್ಞರ ಸೊಸೈಟಿಯು ಅಥವಾ ಸದರಿ ಸೊಸೈಟಿಯ ಉದ್ದೇಶಕ್ಕೆ ಸಂಬಂಧಿಸಿದಂತೆ ಅದು, ಅದರೊಂದಿಗೆ ಅಥವಾ ಅದರ ಪರವಾಗಿನ ಎಲ್ಲಾ ಋಣಗಳನ್ನು, ವಹಿಸುವ ಬಾಧ್ಯತೆಗಳನ್ನು ಮತ್ತು ಹೊಣೆಗಾರಿಕೆಗಳನ್ನು, ಮಾಡಿಕೊಂಡ ಎಲ್ಲಾ ಕರಾರುಗಳನ್ನು ಮತ್ತು ಮಾಡಲು ತೊಡಗಿದ ಎಲ್ಲಾ ವಿಷಯಗಳನ್ನು ಮತ್ತು ಕಾರ್ಯಗಳನ್ನು, ಆ ಸಂಸ್ಥೆಯು, ಆ ಸಂಸ್ಥೆಯೊಂದಿಗೆ ಅಥವಾ ಆ ಸಂಸ್ಥೆಯ ಪರವಾಗಿ ವಹಿಸಲಾಗಿದೆಯೆಂದು, ಮಾಡಿಕೊಳ್ಳಲಾಗಿದೆಯೆಂದು ಅಥವಾ ಮಾಡಲು ತೊಡಗಲಾಗಿದೆಯೆಂದು ಭಾವಿಸತಕ್ಕದ್ದು;

(ಸಿ) ಆ ದಿನದ ನಿಕಟಪೂರ್ವದಲ್ಲಿ ವಿಮಾ ತಜ್ಞರ ಸೊಸೈಟಿಗೆ ಬಾಕಿಯಿರುವ ಎಲ್ಲಾ ಹಣದ ಮೊತ್ತಗಳು ಸಂಸ್ಥೆಗೆ ಬಾಕಿಯಿರುವುದಾಗಿ ಭಾವಿಸತಕ್ಕದ್ದು; ಮತ್ತು

(ಡಿ) ಆ ದಿನದ ನಿಕಟಪೂರ್ವದಲ್ಲಿ ವಿಮಾ ತಜ್ಞರ ಸೊಸೈಟಿಯು ಅಥವಾ ಅದರ ವಿರುದ್ಧ ಹೂಡಿದ ಅಥವಾ ಹೂಡಬಹುದಾಗಿದ್ದಂಥ ಎಲ್ಲಾ ದಾವೆಗಳನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಸಂಸ್ಥೆಯು ಅಥವಾ ಸಂಸ್ಥೆಯ ವಿರುದ್ಧ ಮುಂದುವರಿಸಬಹುದು ಅಥವಾ ಹೂಡಬಹುದು.

**5. ಸಂಸ್ಥೆಯ ಉದ್ದೇಶಗಳು.–** ಸಂಸ್ಥೆಯ ಉದ್ದೇಶಗಳು,–

(ಎ) ವಿಮಾ ತಜ್ಞರ ನಡುವೆ ವೃತ್ತಿ ಶಿಕ್ಷಣ, ತರಬೇತಿ, ಜ್ಞಾನ, ವೃತ್ತಿ ನಡೆಸುವಿಕೆ ಮತ್ತು ನಡತೆಯ ಗುಣಮಟ್ಟಗಳನ್ನು ವೃದ್ಧಿಗೊಳಿಸುವುದು, ಸಮರ್ಥಿಸುವುದು ಮತ್ತು ಅಭಿವೃದ್ಧಿಪಡಿಸುವುದು;

(ಬಿ) ವಿಮಾ ತಜ್ಞರ ವೃತ್ತಿಯ ಸ್ಥಾನಮಾನವನ್ನು ವೃದ್ಧಿಗೊಳಿಸುವುದು;

(ಸಿ) ವಿಮಾ ತಜ್ಞ ವೃತ್ತಿನಿರತರು ವೃತ್ತಿ ನಡೆಸುವಿಕೆಯನ್ನು ವಿನಿಯಮಿಸುವುದು;

(ಡಿ) ವಿಮಾ ತಜ್ಞತೆ ವಿಜ್ಞಾನ ಮತ್ತು ಅದರ ಅನ್ವಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಜ್ಞಾನವನ್ನು ಮತ್ತು ಸಂಶೋಧನೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ, ವೃದ್ಧಿಗೊಳಿಸುವುದು; ಮತ್ತು

(ಇ) ಮೇಲ್ಕಂಡ ಉದ್ದೇಶಗಳಿಗೆ ಅಥವಾ ಅವುಗಳಲ್ಲಿ ಯಾವುದಾದರೊಂದಕ್ಕೆ ಪ್ರಾಸಂಗಿಕವಾಗಬಹುದಾದಂಥ ಅಥವಾ ಸಹಾಯಕವಾಗಬಹುದಾದಂಥ ಎಲ್ಲಾ ಇತರ ಕಾರ್ಯಗಳನ್ನು ಮಾಡುವುದು

– ಆಗಿರತಕ್ಕದ್ದು.

**6. ರಿಜಿಸ್ಟರಿನಲ್ಲಿ ಹೆಸರುಗಳ ನಮೂದು.–** (1) ಈ ಕೆಳಕಂಡ ಯಾರೇ ವ್ಯಕ್ತಿಯು ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನೋಂದಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು, ಎಂದರೆ:–

(ಎ) ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವದಲ್ಲಿ ವಿಮಾ ತಜ್ಞರ ಸೊಸೈಟಿಯ ಸಹಸದಸ್ಯನಾಗಿದ್ದ ಅಥವಾ ಅಧಿಸದಸ್ಯನಾಗಿದ್ದ (ಗೌರವ ಅಧಿಸದಸ್ಯನೂ ಸೇರಿದಂತೆ) ಯಾರೇ ವ್ಯಕ್ತಿ;

(ಬಿ) ಭಾರತದ ಖಾಯಂ ನಿವಾಸಿಯಲ್ಲದ ಯಾರೇ ವ್ಯಕ್ತಿಯನ್ನು ಹೊರತುಪಡಿಸಿ, ವಿಮಾ ತಜ್ಞರ ಸೊಸೈಟಿಯು ನಡೆಸಿದ ಪರೀಕ್ಷೆಯಲ್ಲಿ ಉತ್ತೀರ್ಣನಾದ ಮತ್ತು ಸದರಿ ಸೊಸೈಟಿಯು ನಿರ್ದಿಷ್ಟಪಡಿಸಿದ ಅಥವಾ ಪರಿಷತ್ತು ನಿರ್ದಿಷ್ಟಪಡಿಸಿದ ಯಾವುದೇ ತರಬೇತಿಯನ್ನು ಪೂರ್ಣಗೊಳಿಸಿದ ಯಾರೇ ವ್ಯಕ್ತಿ;

(ಸಿ) ಸಂಸ್ಥೆಯ ಸದಸ್ಯತ್ವಕ್ಕಾಗಿ ನಿರ್ದಿಷ್ಟಪಡಿಸಬಹುದಾದಂಥ ಪರೀಕ್ಷೆಯಲ್ಲಿ ಉತ್ತೀರ್ಣನಾದ ಮತ್ತು ಅಂಥ ತರಬೇತಿಯನ್ನು ಪೂರ್ಣಗೊಳಿಸಿದ ಯಾರೇ ವ್ಯಕ್ತಿ;

(ಡಿ) ಸಂಸ್ಥೆಯ ಸದಸ್ಯತ್ವಕ್ಕಾಗಿ ಈ ಅಧಿನಿಯಮದ ಮೇರೆಗೆ ನಿರ್ದಿಷ್ಟಪಡಿಸಲಾದ ಪರೀಕ್ಷೆಗೆ ಮತ್ತು ತರಬೇತಿಗೆ ತತ್ಸಮಾನವಾದುದೆಂದು ಅದು ನಿರ್ದಿಷ್ಟಪಡಿಸಿದ ಭಾರತದ ಹೊರಗಿನ ಇತರ ಪರೀಕ್ಷೆಯಲ್ಲಿ ಉತ್ತೀರ್ಣನಾದ ಮತ್ತು ಅಂಥ ಇತರ ತರಬೇತಿಯನ್ನು ಪೂರ್ಣಗೊಳಿಸಿದ ಯಾರೇ ವ್ಯಕ್ತಿ:

ಪರಂತು, ಈ ಉಪಪ್ರಕರಣದಲ್ಲಿ ನಮೂದಿಸಿದ ವರ್ಗಗಳ ಪೈಕಿ ಯಾವುದೇ ವರ್ಗಕ್ಕೆ ಸೇರಿದ ಯಾರೇ ವ್ಯಕ್ತಿಯು ಭಾರತದಲ್ಲಿ ಖಾಯಂ ನಿವಾಸಿಯಾಗಿರದ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು ಅಥವಾ ಪರಿಷತ್ತು, ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಅಥವಾ ವಿಹಿತವೆಂದು ಭಾವಿಸಬಹುದಾದಂಥ ಇನ್ನೂ ಹೆಚ್ಚಿನ ಷರತ್ತುಗಳನ್ನು ವಿಧಿಸಬಹುದು.

(2) (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಸೂಚಿಸಿದ ಪ್ರತಿಯೊಬ್ಬ ವ್ಯಕ್ತಿಯು ಯಾವುದೇ ಪ್ರವೇಶ ಶುಲ್ಕವನ್ನು ಸಂದಾಯ ಮಾಡದೆ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಬಹುದು.

(3) ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ಮೇಲೆ ಮತ್ತು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಮಂಜೂರಾದ ಮೇಲೆ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ನಂತರ ರಿಜಿಸ್ಟರಿನಲ್ಲಿ (1)ನೇ ಉಪಪ್ರಕರಣದ (ಬಿ) (ಸಿ) ಮತ್ತು(ಡಿ) ಖಂಡಗಳಲ್ಲಿ ನಮೂದಿಸಿದ ವರ್ಗಗಳಲ್ಲಿ ಯಾವುದೇ ವರ್ಗಕ್ಕೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಹೆಸರನ್ನು ನಮೂದಿಸಿಕೊಳ್ಳತಕ್ಕದ್ದು.

(4) (1)ನೇ ಉಪಪ್ರಕರಣದ (ಎ) ಖಂಡದಲ್ಲಿ ನಮೂದಿಸಿದ ವರ್ಗಕ್ಕೆ ಸೇರಿದ ಎಲ್ಲಾ ವ್ಯಕ್ತಿಗಳ ಹೆಸರುಗಳನ್ನು ಗೊತ್ತುಪಡಿಸಿದ ದಿನಕ್ಕೆ ಮುಂಚೆ ರಿಜಿಸ್ಟರಿನಲ್ಲಿ ನಮೂದಿಸಿಕೊಳ್ಳುವ ಉದ್ದೇಶಕ್ಕಾಗಿ ಪರಿಷತ್ತು ಅಗತ್ಯವಿರಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(5) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿಯು ವಿಮಾ ತಜ್ಞ ವೃತ್ತಿಗೆ ಮಹತ್ವಪೂರ್ಣ ಕೊಡುಗೆಯನ್ನು ನೀಡಿದ್ದಾನೆಂದು ಪರಿಷತ್ತು ಅಭಿಪ್ರಾಯಪಟ್ಟರೆ, ಅಂಥ ವ್ಯಕ್ತಿಗೆ ಗೌರವ ಅಧಿ ಸದಸ್ಯತ್ವವನ್ನು ಪರಿಷತ್ತು ಪ್ರದಾನ ಮಾಡಬಹುದು ಮತ್ತು ತದನಂತರ ಪರಿಷತ್ತು ರಿಜಿಸ್ಟರಿನಲ್ಲಿ ಅಂಥ ವ್ಯಕ್ತಿಯ ಹೆಸರನ್ನು ನಮೂದಿಸತಕ್ಕದ್ದು, ಆದರೆ, ಅಂಥ ವ್ಯಕ್ತಿಯು, ಸಂಸ್ಥೆಯ ಯಾವುದೇ

ಚುನಾವಣೆಯಲ್ಲಿ ಅಥವಾ ಸಭೆಗಳಲ್ಲಿ ಯಾವುದೇ ಮತದಾನದ ಹಕ್ಕುಗಳನ್ನು ಹೊಂದಿರತಕ್ಕದ್ದಲ್ಲ ಹಾಗೂ ಸಂಸ್ಥೆಗೆ ಆತ ಯಾವುದೇ ಫೀಜನ್ನು ಸಂದಾಯ ಮಾಡುವ ಅಗತ್ಯವಿರತಕ್ಕದ್ದಲ್ಲ.

**7. ಸಹಸದಸ್ಯರು ಮತ್ತು ಅಧಿಸದಸ್ಯರು.–** (1) ಸಂಸ್ಥೆಯ ಸದಸ್ಯರುಗಳನ್ನು ಕ್ರಮವಾಗಿ ಸಹಸದಸ್ಯರು ಮತ್ತು ಅಧಿಸದಸ್ಯರೆಂದು ಹೆಸರಿಸಲಾದ ಎರಡು ವರ್ಗಗಳಾಗಿ ವಿಭಾಗಿಸತಕ್ಕದ್ದು.

(2) ಯಾರಿಗೆ (3)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗುತ್ತವೆಯೋ ಆ ವ್ಯಕ್ತಿಯನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿಯು ರಿಜಿಸ್ಟರಿನಲ್ಲಿ ಅವನ ಹೆಸರನ್ನು ಸೇರಿಸಿದ ಮೇಲೆ, ಸಹಸದಸ್ಯನಾಗಿರುವನೆಂದು ಭಾವಿಸತಕ್ಕದ್ದು ಮತ್ತು ಅವನ ಹೆಸರು ಹಾಗೆ ಎಲ್ಲಿಯವರೆಗೆ ನಮೂದಾಗಿರುತ್ತದೆಯೋ ಅಲ್ಲಿಯವರೆಗೆ ಅವನು ಸಹಸದಸ್ಯನೆಂದು ಸೂಚಿಸಲು ಅವನ ಹೆಸರಿನ ನಂತರ "ಎಐಎಐ" ಎಂಬ ಅಕ್ಷರಗಳನ್ನು ಬಳಸುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(3) ವಿಮಾ ತಜ್ಞರ ಸೊಸೈಟಿಯ ಅಧಿಸದಸ್ಯನಾಗಿರುವ ಮತ್ತು 6ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳವನಾಗಿರುವ ಯಾರೇ ವ್ಯಕ್ತಿಯನ್ನು ಅಧಿಸದಸ್ಯನೆಂದು ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(4) ಅಧಿಸದಸ್ಯನಾಗಿ ರಿಜಿಸ್ಟರಿನಲ್ಲಿ ಯಾರ ಹೆಸರನ್ನು ನಮೂದಿಸಲಾಗಿದೆಯೋ ಆ ಯಾರೇ ವ್ಯಕ್ತಿಯು, ಅವನ ಹೆಸರು ಎಲ್ಲಿಯವರೆಗೆ ಹಾಗೆ ನಮೂದಾಗಿರುತ್ತದೋ ಅಲ್ಲಿಯವರೆಗೆ ಅವನು ಅಧಿ ಸದಸ್ಯನೆಂದು ಸೂಚಿಸಲು ಅವನ ಹೆಸರಿನ ನಂತರ "ಎಫ್ಐಎಐ' ಎಂಬ ಅಕ್ಷರಗಳನ್ನು ಬಳಸಲು ಹಕ್ಕುಳ್ಳವನಾಗಿರತಕ್ಕದ್ದು.

**8. ಗೌರವ, ಸಂಯೋಜಿತ ಮತ್ತು ವಿದ್ಯಾರ್ಥಿ ಸದಸ್ಯರು.–** (1) ವಿಮಾ ತಜ್ಞರ ವೃತ್ತಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಪಾಂಡಿತ್ಯ ಹೊಂದಿರುವ ಮತ್ತು ವಿಮಾ ತಜ್ಞರ ವೃತ್ತಿಯ ಬಗ್ಗೆ ಆಸಕ್ತಿಯಿರುವ ಯಾರೇ ವ್ಯಕ್ತಿಯನ್ನು ಪರಿಷತ್ತು ಸಂಸ್ಥೆಯ ಗೌರವ ಸದಸ್ಯನನ್ನಾಗಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಆಯ್ಕೆ ಮಾಡಬಹುದು, ಆದರೆ ಅವನು ವಿಮಾ ತಜ್ಞರ ವೃತ್ತಿಯನ್ನು ನಡೆಸುತ್ತಿರಬಾರದು.

(2) ಸಂಸ್ಥೆಯಂಥದೇ ಸಂಸ್ಥೆಯಾಗಿರುವ ಯಾವುದೇ ಇತರ ಸಂಸ್ಥೆಯು ಅದು ಭಾರತದೊಳಗಿರಲಿ ಅಥವಾ ಭಾರತದ ಹೊರಗಿರಲಿ, ಅದರ ಅಧಿಸದಸ್ಯನಾಗಿರುವ ಅಥವಾ ಆ ಸಂಸ್ಥೆಯ ಅಧಿಸದಸ್ಯತ್ವಕ್ಕೆ ತತ್ಸಮಾನವಾದುದೆಂದು ಪರಿಗಣಿಸಿದ ಸದಸ್ಯತ್ವವನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು,

ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಮತ್ತು ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಸಂಯೋಜಿತ ಸದಸ್ಯನೆಂದು ಸೇರಿಸಿಕೊಳ್ಳಬಹುದು.

(3) ಸಂಸ್ಥೆಯ ಪರೀಕ್ಷೆಗಾಗಿ ತಾನೇ ಸ್ವತಃ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಿಕೊಂಡ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಶೈಕ್ಷಣಿಕ ಅರ್ಹತೆಗಳನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು, ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಸಂಸ್ಥೆಯ ವಿದ್ಯಾರ್ಥಿ ಸದಸ್ಯನೆಂದು ಸೇರಿಸಿಕೊಳ್ಳಬಹುದು.

(4) ಗೌರವ ಸದಸ್ಯನು ಅಥವಾ ಸಂಯೋಜಿತ ಸದಸ್ಯನು ಅಥವಾ ವಿದ್ಯಾರ್ಥಿ ಸದಸ್ಯನು ಸಂಸ್ಥೆಯ ಯಾವುದೇ ಸಭೆಯಲ್ಲಿ ಯಾವುದೇ ವಿಷಯದ ಮೇಲೆ ಅಥವಾ ನಿರ್ಣಯದ ಮೇಲೆ ಮತ ಹಾಕುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

**9. ವೃತ್ತಿ ಪ್ರಮಾಣಪತ್ರ.–** (1) ಸಂಸ್ಥೆಯ ಯಾರೇ ಸದಸ್ಯನು, ನಿರ್ದಿಷ್ಟಪಡಿಸಬಹುದಾದ ಅರ್ಹತೆಗಳನ್ನು ಹೊಂದಿದ್ದ ಹೊರತು ಮತ್ತು ಪರಿಷತ್ತಿನಿಂದ ವೃತ್ತಿ ಪ್ರಮಾಣಪತ್ರವನ್ನು ಪಡೆದುಕೊಂಡಿರುವ ಹೊರತು, ವೃತ್ತಿ ನಡೆಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ವೃತ್ತಿ ನಡೆಸಲು ಹಕ್ಕುಳ್ಳವನಾಗಲು ಬಯಸುವ ಸದಸ್ಯನು, ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ವೃತ್ತಿ ನಡೆಸಲು ಪ್ರಮಾಣಪತ್ರಕ್ಕಾಗಿ ನಿರ್ದಿಷ್ಟಪಡಿಸಬಹುದಾದಂಥ ವಾರ್ಷಿಕ ಫೀಜನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಫೀಜನ್ನು ಪ್ರತಿವರ್ಷದ ಏಪ್ರಿಲ್ ಮೊದಲನೇ ದಿನದಂದು ಅಥವಾ ಅದಕ್ಕೂ ಮುಂಚೆ ಸಂದಾಯ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಪಡೆದ ವೃತ್ತಿ ನಡೆಸುವ ಪ್ರಮಾಣಪತ್ರವನ್ನು ಪರಿಷತ್ತು, ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ರದ್ದುಪಡಿಸಬಹುದು.

**10. ಸದಸ್ಯರನ್ನು ವಿಮಾ ತಜ್ಞರೆಂದು ಕರೆಯುವುದು.–** ವೃತ್ತಿ ನಡೆಸುತ್ತಿರುವ ಸಂಸ್ಥೆಯ ಪ್ರತಿಯೊಬ್ಬ ಸದಸ್ಯನು ವಿಮಾ ತಜ್ಞನ ಪದನಾಮವನ್ನು ಬಳಸಿಕೊಳ್ಳತಕ್ಕದ್ದು ಮತ್ತು ಯಾರೇ ಇತರ ಸದಸ್ಯನು ವಿಮಾ ತಜ್ಞನ ಪದನಾಮವನ್ನು ಬಳಸಿಕೊಳ್ಳಬಹುದು ಮತ್ತು ಅಂಥ ಪದನಾಮವನ್ನು ಬಳಸುವ ಯಾರೇ ಸದಸ್ಯನು ಅದಕ್ಕೆ ಹೆಚ್ಚುವರಿಯಾಗಿ ಅಥವಾ ಅದಕ್ಕೆ ಬದಲಾಗಿ ಯಾವುದೇ ಇತರ ವರ್ಣನೆಯನ್ನು ಬಳಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಯಾರೇ ಅಂಥ ಸದಸ್ಯನು ಭಾರತದಲ್ಲಿರುವ ಅಥವಾ ಇನ್ನೆಲ್ಲಿಯಾದರೂ ಇರುವ ಮತ್ತು ಪರಿಷತ್ತು ಈ ಬಗ್ಗೆ ಮನ್ನಣೆ ನೀಡಬಹುದಾದಂಥ ಇತರ

ಸಂಸ್ಥೆಯ ಸದಸ್ಯತ್ವವನ್ನು ಸೂಚಿಸಲು ಅಥವಾ ಅವನು ಪಡೆದಿರುವ ಯಾವುದೇ ಇತರ ಅರ್ಹತೆಯನ್ನು ಸೂಚಿಸಲು ತನ್ನ ಹೆಸರಿಗೆ ಯಾವುದೇ ಇತರ ವರ್ಣನೆಯನ್ನು ಅಥವಾ ಅಕ್ಷರಗಳನ್ನು ಸೇರಿಸಿಕೊಳ್ಳುವುದಕ್ಕೆ ಹಕ್ಕುಳ್ಳವನಾಗಿದ್ದರೆ, ಆ ಯಾರೇ ಅಂಥ ಸದಸ್ಯನು ಆ ವರ್ಣನೆಯನ್ನು ಅಥವಾ ಅಕ್ಷರಗಳನ್ನು ಸೇರಿಸಿಕೊಳ್ಳುವುದನ್ನು ನಿಷೇಧಿಸುತ್ತದೆಂದು ಅಥವಾ ಯಾವ ಫರ್ಮಿನ ಎಲ್ಲ ಪಾಲುದಾರರು ಸಂಸ್ಥೆಯ ಸದಸ್ಯರಾಗಿರುವರೋ ಮತ್ತು ವೃತ್ತಿಯನ್ನು ನಡೆಸುತ್ತಿರುವರೋ ಆ ಫರ್ಮ್ ವಿಮಾ ತಜ್ಞರೆಂಬ ಹೆಸರಿನಿಂದ ಕರೆಸಿಕೊಳ್ಳುವುದನ್ನು ನಿಷೇಧಿಸುವುದಾಗಿ ಭಾವಿಸತಕ್ಕದ್ದಲ್ಲ.

**11. ಅನರ್ಹತೆಗಳು.–** 6ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ವ್ಯಕ್ತಿಯು,–

(ಎ) ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳುವುದಕ್ಕಾಗಿ ತನ್ನ ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಅವನಿಗೆ ಇಪ್ಪತ್ತೊಂದು ವರ್ಷ ವಯಸ್ಸು ತುಂಬಿಲ್ಲದಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತದವನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ವಿಮುಕ್ತ ದಿವಾಳಿಯಾಗಿದ್ದು, ಅವನ ದಿವಾಳಿತನವು ದುರದೃಷ್ಟವಶಾತ್ ಉಂಟಾಗಿದ್ದೆಂದು ಮತ್ತು ಅವನ ಯಾವುದೇ ದುರ್ನಡತೆಯಿಂದ ಉಂಟಾದುದಲ್ಲವೆಂದು ತಿಳಿಸುವ ಪ್ರಮಾಣಪತ್ರವನ್ನು ನ್ಯಾಯಾಲಯದಿಂದ ಪಡೆದಿರದಿದ್ದರೆ; ಅಥವಾ

(ಇ) ನೈತಿಕ ಅಧಃ ಪತನವನ್ನೊಳಗೊಂಡ ಮತ್ತು ಅವನ ವೃತ್ತಿಯ ಸಾಮರ್ಥ್ಯದಲ್ಲಿ ಅವನು ಎಸಗಿದ ತಾಂತ್ರಿಕ ಸ್ವರೂಪದ್ದಲ್ಲದ ಅಪರಾಧದ ಬಗ್ಗೆ ಕಾರಾವಾಸದಿಂದ ದಂಡನೀಯವಾಗುವ ಅಪರಾಧಕ್ಕಾಗಿ ಭಾರತದಲ್ಲಿನ ಅಥವಾ ಭಾರತದ ಹೊರಗಿನ ಸಕ್ಷಮ ನ್ಯಾಯಾಲಯದಿಂದ ಅಪರಾಧಿಯೆಂದು ಅಪರಾಧ ನಿರ್ಣೀತನಾಗಿದ್ದರೆ, ಅವನು ಎಸಗಿದ ಆ ಅಪರಾಧದ ಸಂಬಂಧದಲ್ಲಿ ಅವನಿಗೆ ಕ್ಷಮಾದಾನ ಮಂಜೂರು ಮಾಡಿದ್ದ ಹೊರತು ಅಥವಾ ಈ ಬಗ್ಗೆ ಅವನು ಸಲ್ಲಿಸಿದ ಅರ್ಜಿಯ ಮೇಲೆ ಕೇಂದ್ರ ಸರ್ಕಾರವು ಲಿಖಿತ ಆದೇಶದ ಮೂಲಕ, ಅನರ್ಹತೆಯನ್ನು ತೆಗೆದುಹಾಕಿದ್ದ ಹೊರತು; ಅಥವಾ

(ಎಫ್) ವೃತ್ತೀಯ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನೆಂದು ವಿಚಾರಣೆಯ ಮೂಲಕ ಕಂಡು ಬಂದ ನಂತರ, ಆತನನ್ನು ಸಂಸ್ಥೆಯ ಸದಸ್ಯತ್ವದಿಂದ ತೆಗೆದುಹಾಕಿದ್ದರೆ

– ಅವನು, ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಅಥವಾ ಹೊಂದಿರಲು ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, ನಿರ್ದಿಷ್ಟ ಅವಧಿಯವರೆಗೆ ಸದಸ್ಯತ್ವದಿಂದ ತೆಗೆದುಹಾಕಲ್ಪಟ್ಟ ವ್ಯಕ್ತಿಯು, ಅಂಥ ಅವಧಿಯು ಮುಕ್ತಾಯವಾಗುವವರೆಗೆ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**12. ಸಂಸ್ಥೆಯ ಪರಿಷತ್ತಿನ ಸಂರಚನೆ.–** (1) ಸಂಸ್ಥೆಯ ವ್ಯವಹಾರಗಳ ನಿರ್ವಹಣೆಗಾಗಿ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ನೆರವೇರಿಸಲು ಸಂಸ್ಥೆಯ ಒಂದು ಪರಿಷತ್ತು ಇರತಕ್ಕದ್ದು.

(2) ಪರಿಷತ್ತು ಈ ಕೆಳಕಂಡ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ನಿಯಮಿಸಬಹುದಾದಂಥ ರೀತಿಯಲ್ಲಿ ಅಧಿಸದಸ್ಯರಿಂದ ಮತ್ತು ಸಹ ಸದಸ್ಯರಿಂದ ಚುನಾಯಿತರಾಗುವ ಅಧಿಸದಸ್ಯರೊಳಗಿಂದ ಕನಿಷ್ಠ ಒಂಬತ್ತು ಮತ್ತು ಹನ್ನೆರಡಕ್ಕಿಂತ ಹೆಚ್ಚಲ್ಲದಷ್ಟು ವ್ಯಕ್ತಿಗಳು:

ಪರಂತು, ಯಾವುದೇ ವೃತ್ತಿ ಸಂಬಂಧಿತ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನೆಂದು ಕಂಡುಬಂದ ಮತ್ತು ಯಾರ ಹೆಸರನ್ನು ರಿಜಿಸ್ಟರಿನಿಂದ ತೆಗೆದು ಹಾಕಲಾಗಿದೆಯೋ ಅಥವಾ ಯಾರಿಗೆ ಜುಲ್ಮಾನೆಯ ದಂಡನೆಯನ್ನು ವಿಧಿಸಲಾಗಿದೆಯೋ ಆ ಸಂಸ್ಥೆಯ ಅಧಿಸದಸ್ಯನು ಸಂದರ್ಭಾನುಸಾರ, ರಿಜಿಸ್ಟರಿನಿಂದ ಅಧಿಸದಸ್ಯನ ಹೆಸರನ್ನು ತೆಗೆದುಹಾಕಲಾದ ಅಥವಾ ಜುಲ್ಮಾನೆಯನ್ನು ಪಾವತಿ ಮಾಡಿದ ಅವಧಿಯ ಮುಕ್ತಾಯದ ತರುವಾಯ,–

(i) [ಭಾಗ –IV (ಬಿ)ಯನ್ನು ಹೊರತುಪಡಿಸಿ] ಈ ಅಧಿನಿಯಮದ ಅನುಸೂಚಿಯ ಅಡಿಯಲ್ಲಿ ಬರುವ ದುರ್ನಡತೆಯ ಸಂದರ್ಭದಲ್ಲಿ, ಮೂರು ವರ್ಷಗಳ ಅವಧಿಗಾಗಿ; ಅಥವಾ

(ii) ಈ ಅಧಿನಿಯಮದ ಅನುಸೂಚಿಯ ಭಾಗ – IV (ಬಿ) ಅಡಿಯಲ್ಲಿ ಬರುವ ದುರ್ನಡತೆಯ ಸಂದರ್ಭದಲ್ಲಿ, ಆರು ವರ್ಷಗಳ ಅವಧಿಗಾಗಿ

– ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹನಾಗಿರತಕ್ಕದ್ದಲ್ಲ; ಮತ್ತು

(ಬಿ) (i) ಹಣಕಾಸು ಮಂತ್ರಾಲಯವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮ ನಿರ್ದೇಶನ ಮಾಡುವ, ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿ;

(ii) ಕೇಂದ್ರ ಸರ್ಕಾರವು ನಾಮ ನಿರ್ದೇಶನ ಮಾಡುವ, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999 (1999ರ 41)ರ ಮೇರೆಗೆ ರಚಿತವಾದ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಒಬ್ಬ ವ್ಯಕ್ತಿ; ಮತ್ತು

(iii) ನಿಯಮಿಸಬಹುದಾದಂಥ ರೀತಿಯಲ್ಲಿ ನಾಮ ನಿರ್ದೇಶನ ಮಾಡಬೇಕಾದ, ಜೀವ ವಿಮೆ, ಸಾಮಾನ್ಯ ವಿಮೆ, ಹಣಕಾಸು, ಅರ್ಥಶಾಸ್ತ್ರ, ಕಾನೂನು, ಲೆಕ್ಕಶಾಸ್ತ್ರ ಅಥವಾ ಪರಿಷತ್ತಿಗೆ ಉಪಯುಕ್ತವಾಗಬಹುದೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವ ಯಾವುದೇ ಇತರ ಕ್ಷೇತ್ರದಲ್ಲಿ ಜ್ಞಾನವನ್ನು ಹೊಂದಿರುವ ಇಬ್ಬರಿಗಿಂತ ಹೆಚ್ಚಲ್ಲದ ವ್ಯಕ್ತಿಗಳು:

ಪರಂತು, ಈ ಅಧಿನಿಯಮದ ಮೇರೆಗೆ ಪರಿಷತ್ತು ರಚಿತವಾಗುವ ಕಾಲದವರೆಗೆ, ವಿಮಾ ತಜ್ಞರ ಸೊಸೈಟಿಯ ಕಾರ್ಯಕಾರಿ ಸಮಿತಿಯು, ಪರಿಷತ್ತಿನ ಎಲ್ಲಾ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಪರಿಷತ್ತಿನ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ಸಂದರ್ಭಾನುಸಾರ, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಯು, (2)ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ಪರಿಷತ್ತಿನ ಚುನಾವಣೆಗೆ ಅರ್ಹನಾಗಿರತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿದ ಪರಿಷತ್ತಿನ ಮೂರನೇ ಒಂದರಷ್ಟು ಸದಸ್ಯರು ಸರದಿಯಂತೆ ಪ್ರತಿ ಎರಡನೇ ವರ್ಷದ ಅವಧಿಯು ಮುಕ್ತಾಯವಾದ ನಂತರ ಆದಷ್ಟು ಬೇಗನೆ ನಿವೃತ್ತಿಯಾಗತಕ್ಕದ್ದು, ಆದರೆ ಮರು ಚುನಾವಣೆಗೆ ಅರ್ಹರಾಗಿರತಕ್ಕದ್ದು.

(5) (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಯಾರೇ ವ್ಯಕ್ತಿಯು, ಕೇಂದ್ರ ಸರ್ಕಾರವು ಅವನನ್ನು ಈ ಮೊದಲೇ ತೆಗೆದುಹಾಕಿದ ಹೊರತು, ಅವನ ನಾಮ

ನಿರ್ದೇಶನದ ದಿನಾಂಕದಿಂದ ಆರು ವರ್ಷಗಳ ಅವಧಿಗೆ ಪದಧಾರಣ ಮಾಡತಕ್ಕದ್ದು ಮತ್ತು ಮರು ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು:

ಪರಂತು, ಹಾಗೆ ತೆಗೆದುಹಾಕುವುದಕ್ಕೆ ಮುಂಚೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು.

**13. ವಾರ್ಷಿಕ ಸರ್ವ ಸದಸ್ಯರ ಸಭೆಗಳು.–** 12ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತನ್ನ ಸದಸ್ಯರನ್ನು ಚುನಾಯಿಸುವುದಕ್ಕೆ ಅಥವಾ ತಾನು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ವಿಷಯವನ್ನು ಚರ್ಚಿಸುವುದಕ್ಕೆ, ಪರಿಷತ್ತು, ಪ್ರತಿ ವರ್ಷ ಸಂಸ್ಥೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನಡೆಸತಕ್ಕದ್ದು ಮತ್ತು ಸಂಸ್ಥೆಯ ಒಂದು ವಾರ್ಷಿಕ ಸರ್ವ ಸದಸ್ಯರ ಸಭೆಯ ದಿನಾಂಕ ಮತ್ತು ಮುಂದಿನ ಸಭೆಯ ದಿನಾಂಕದ ನಡುವೆ ಹದಿನೈದು ತಿಂಗಳುಗಳಿಗಿಂತ ಹೆಚ್ಚು ಕಾಲಾವಧಿ ಇರತಕ್ಕದ್ದಲ್ಲ:

ಪರಂತು, ಗೊತ್ತುಪಡಿಸಿದ ದಿನದಿಂದ ಸಂಸ್ಥೆಯು, ಹದಿನೆಂಟು ತಿಂಗಳುಗಳಿಗಿಂತ ಹೆಚ್ಚಲ್ಲದ ಅವಧಿಯೊಳಗೆ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ನಡೆಸಬಹುದು ಮತ್ತು ಅಂಥ ಸರ್ವ ಸದಸ್ಯರ ಸಭೆಯು ಆ ಅವಧಿಯೊಳಗೆ ನಡೆದರೆ ಆ ವರ್ಷದಲ್ಲಿ ಯಾವುದೇ ಸರ್ವ ಸದಸ್ಯರ ಸಭೆಯನ್ನು ನಡೆಸಲು ಸಂಸ್ಥೆಗೆ ಅಗತ್ಯವಿರತಕ್ಕದ್ದಲ್ಲ:

ಮತ್ತೂ ಪರಂತು, ಕೇಂದ್ರ ಸರ್ಕಾರವು, ಸಾಕಷ್ಟು ಕಾರಣಗಳಿಗಾಗಿ, ಯಾವುದೇ ಸರ್ವ ಸದಸ್ಯರ ಸಭೆಯನ್ನು ಯಾವ ಅವಧಿಯೊಳಗೆ ನಡೆಸತಕ್ಕದ್ದೋ ಆ ಅವಧಿಯನ್ನು ವಿಸ್ತರಿಸಬಹುದು.

**14. ಪರಿಷತ್ತಿಗೆ ಮರು ಚುನಾವಣೆ.–** (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, 12ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ಚುನಾಯಿತನಾದ ಪರಿಷತ್ತಿನ ಸದಸ್ಯನು ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದು, ಆದರೆ ನಿರಂತರ ಎರಡು ಅವಧಿಗಳಿಗಿಂತ ಹೆಚ್ಚಿನ ಅವಧಿಗಾಗಿ ಅಲ್ಲ.

(2) 17ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನಾಗಿ ಚುನಾಯಿತನಾಗಿರುವ ಅಥವಾ ಚುನಾಯಿತನಾಗಿದ್ದ ಪರಿಷತ್ತಿನ ಸದಸ್ಯನು, ಪರಿಷತ್ತಿನ ಸದಸ್ಯನಾಗಿ ಚುನಾವಣೆಗೆ ಅಥವಾ ನಾಮ ನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

**15. ಚುನಾವಣೆಗೆ ಸಂಬಂಧಪಟ್ಟ ವಿವಾದಗಳ ಇತ್ಯರ್ಥ.–** 12ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ಯಾವುದೇ ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ವಿವಾದ

ಇದ್ದಲ್ಲಿ, ಬಾಧಿತ ವ್ಯಕ್ತಿಯು, ಚುನಾವಣಾ ಫಲಿತಾಂಶವು ಘೋಷಣೆಯಾದ ದಿನಾಂಕದಿಂದ ಮೂವತ್ತು ದಿವಸದೊಳಗೆ ಪರಿಷತ್ತಿಗೆ ಅರ್ಜಿಯನ್ನು ಸಲ್ಲಿಸಬಹುದು, ಪರಿಷತ್ತು, ತಕ್ಷಣವೇ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**16. ನ್ಯಾಯಾಧಿಕರಣದ ಸ್ಥಾಪನೆ.–** (1) 15ನೇ ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ನಂತರ, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಅಂಥ ವಿವಾದವನ್ನು ತೀರ್ಮಾನಿಸಲು ಒಬ್ಬ ಪೀಠಾಸೀನಾಧಿಕಾರಿಯನ್ನು ಮತ್ತು ಇಬ್ಬರು ಸದಸ್ಯರನ್ನು ಒಳಗೊಂಡ ನ್ಯಾಯಾಧಿಕರಣವನ್ನು ಸ್ಥಾಪಿಸತಕ್ಕದ್ದು ಮತ್ತು ಅಂಥ ನ್ಯಾಯಾಧಿಕರಣದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) ಒಬ್ಬ ವ್ಯಕ್ತಿಯು,–

(ಎ) ಭಾರತೀಯ ಕಾನೂನು ಸೇವೆಯ ಸದಸ್ಯನಾಗಿದ್ದ ಹೊರತು ಮತ್ತು ಅವನು ಕೊನೇಪಕ್ಷ ಮೂರು ವರ್ಷಗಳ ಕಾಲ ಆ ಸೇವೆಯ ದರ್ಜೆ–1ರ ಹುದ್ದೆಯನ್ನು ಹೊಂದಿದ್ದ ಹೊರತು, ನ್ಯಾಯಾಧಿಕರಣದ ಪೀಠಾಸೀನಾಧಿಕಾರಿಯಾಗಿ;

(ಬಿ) ಅವನು ಕೊನೇಪಕ್ಷ ಒಂದು ಪೂರ್ಣಾವಧಿ ಕಾಲ ಪರಿಷತ್ತಿನ ಸದಸ್ಯನಾಗಿದ್ದ ಹೊರತು ಮತ್ತು ಪರಿಷತ್ತಿನ ಹಾಲಿ ಸದಸ್ಯನಲ್ಲದ ಹೊರತು ಅಥವಾ ವಿವಾದದಲ್ಲಿರುವ ಚುನಾವಣೆಯಲ್ಲಿ ಅಭ್ಯರ್ಥಿಯಾಗಿಲ್ಲದ ಹೊರತು, ಸದಸ್ಯನಾಗಿ; ಮತ್ತು

(ಸಿ) ಅವನು ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ಹುದ್ದೆಯನ್ನು ಹೊಂದಿದ್ದ ಹೊರತು, ಅಥವಾ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಿಂತ ಕಡಿಮೆಯಲ್ಲದ ವೇತನ ಶ್ರೇಣಿಯಲ್ಲಿ ಕೇಂದ್ರ ಸರ್ಕಾರದ ಅಡಿಯಲ್ಲಿ ಯಾವುದೇ ಇತರ ಹುದ್ದೆಯನ್ನು ಹೊಂದಿದ್ದ ಹೊರತು, ಸದಸ್ಯನಾಗಿ

– ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(3) ನ್ಯಾಯಾಧಿಕರಣದ ಪೀಠಾಸೀನಾಧಿಕಾರಿಯ ಮತ್ತು ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ಅವರ ಸಭೆಗಳ ಸ್ಥಳ, ಪರಿಶ್ರಮಧನ ಮತ್ತು ಭತ್ಯೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ನ್ಯಾಯಾಧಿಕರಣದ ಖರ್ಚುಗಳನ್ನು ಪರಿಷತ್ತು ಭರಿಸತಕ್ಕದ್ದು.

**17. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಗೌರವ ಕಾರ್ಯದರ್ಶಿ.–** (1) ಪರಿಷತ್ತು, ತನ್ನ ಪ್ರಥಮ ಸಭೆಯಲ್ಲಿ, 12ನೇ ಪ್ರಕರಣದ (2)ನೇ ಉಪಪ್ರಕರಣದ (ಎ)ಖಂಡದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳೊಳಗಿಂದ ಮೂವರು ಸದಸ್ಯರನ್ನು ಅನುಕ್ರಮವಾಗಿ ಅದರ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಗೌರವ ಕಾರ್ಯದರ್ಶಿ ಎಂದು ಆಯ್ಕೆ ಮಾಡತಕ್ಕದ್ದು ಮತ್ತು ಒಬ್ಬ ಸದಸ್ಯನನ್ನು, ಅಧ್ಯಕ್ಷನ, ಉಪಾಧ್ಯಕ್ಷನ ಮತ್ತು ಗೌರವ ಕಾರ್ಯದರ್ಶಿಯ ಸ್ಥಾನವು ಖಾಲಿಯಾದಾಗಲೆಲ್ಲಾ ಅದೇ ರೀತಿಯಲ್ಲಿ ಚುನಾಯಿಸತಕ್ಕದ್ದು:

ಪರಂತು, ವಿಮಾ ತಜ್ಞರ ಸೊಸೈಟಿಯ ಪರಿಷತ್ತಿನ ಪೀಠಾಧ್ಯಕ್ಷನು, ಈ ಅಧಿನಿಯಮದ ಪ್ರಾರಂಭದ ತರುವಾಯ ಅಧ್ಯಕ್ಷನಾಗಿ, ಈ ಉಪ ಪ್ರಕರಣದ ಉಪಬಂಧಗಳ ಮೇರೆಗೆ ಅಧ್ಯಕ್ಷನು ಚುನಾಯಿತನಾಗುವ ಕಾಲದವರೆಗೆ, ಆ ಹುದ್ದೆಯನ್ನು ಧಾರಣ ಮಾಡಿರುವುದು ಮುಂದುವರಿಯತಕ್ಕದ್ದು.

(2) ಅಧ್ಯಕ್ಷನು ಪರಿಷತ್ತಿನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು.

(3) ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಗೌರವ ಕಾರ್ಯದರ್ಶಿಯು, ಅವನು ಆಯ್ಕೆಯಾದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಹುದ್ದೆಯನ್ನು ಧಾರಣ ಮಾಡತಕ್ಕದ್ದು, ಪರಂತು, ಅವನು ಪರಿಷತ್ತಿನ ಸದಸ್ಯನಾಗಿ ಮುಂದುವರಿದಿರಬೇಕು.

(4) ಅಧ್ಯಕ್ಷ ಮತ್ತು ಉಪಾಧ್ಯಕ್ಷನು, ತನ್ನ ಪದಾವಧಿಯು ಮುಕ್ತಾಯವಾಗಿದ್ದರೂ, ಅವನ ಪದಕ್ಕೆ ಅವನ ಉತ್ತರಾಧಿಕಾರಿಯು ಬರುವವರೆಗೆ ಪದ ಧಾರಣ ಮಾಡಿರುವುದು ಮುಂದುವರಿಯತಕ್ಕದ್ದು.

(5) ಅಧ್ಯಕ್ಷನ ಪದವು ಖಾಲಿಯಾದ ಸಂದರ್ಭದಲ್ಲಿ, ಅಂಥ ಖಾಲಿ ಸ್ಥಾನವನ್ನು ತುಂಬುವುದಕ್ಕೆ ಮತ್ತು ಅವನ ಪದವನ್ನು ವಹಿಸಿಕೊಳ್ಳುವುದಕ್ಕೆ ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಹೊಸ ಅಧ್ಯಕ್ಷನನ್ನು ಚುನಾಯಿಸುವವರೆಗೆ, ಉಪಾಧ್ಯಕ್ಷನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸತಕ್ಕದ್ದು.

(6) ಗೈರು ಹಾಜರಿಯ, ಅನಾರೋಗ್ಯದ ಅಥವಾ ಯಾವುದೇ ಇತರ ಕಾರಣದಿಂದ ಅಧ್ಯಕ್ಷನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ, ಅವನು ತನ್ನ ಕರ್ತವ್ಯಗಳನ್ನು ಪುನಃ ವಹಿಸಿಕೊಳ್ಳುವವರೆಗೆ ಉಪಾಧ್ಯಕ್ಷನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸತಕ್ಕದ್ದು.

**18. ಸದಸ್ಯತ್ವಕ್ಕೆ ರಾಜೀನಾಮೆ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳನ್ನು ತುಂಬುವುದು.–** (1) ಪರಿಷತ್ತಿನ ಯಾರೇ ಸದಸ್ಯನು ತಾನು ಸಹಿ ಮಾಡಿ ಅಧ್ಯಕ್ಷನಿಗೆ ಸಂಭೋದಿಸಿ ಲಿಖಿತದಲ್ಲಿ ತನ್ನ ಸದಸ್ಯತ್ವಕ್ಕೆ ಯಾವುದೇ ಕಾಲದಲ್ಲಿ ರಾಜೀನಾಮೆ ಸಲ್ಲಿಸಬಹುದು ಮತ್ತು ಅಂಥ ರಾಜೀನಾಮೆಯು ಪರಿಷತ್ತಿನಿಂದ ಅಂಗೀಕೃತವಾಗಿ ಅಧಿಸೂಚಿತವಾದಾಗ ಅಂಥ ಸದಸ್ಯನ ಸ್ಥಾನವು ಖಾಲಿಯಾಗತಕ್ಕದ್ದು.

(2) 12ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನಾಮ ನಿರ್ದೇಶಿತನಾದ ಸದಸ್ಯನನ್ನು ಹೊರತು ಪಡಿಸಿ, ಪರಿಷತ್ತಿನ ಸದಸ್ಯನು, ಪರಿಷತ್ತಿನ ಅಥವಾ ಪರಿಷತ್ತು ರಚಿಸಿದ ಸಮಿತಿಗಳಲ್ಲಿ, ಅವನು ಸದಸ್ಯನಾಗಿರುವ ಸಮಿತಿಯ ಮೂರು ನಿರಂತರ ಸಭೆಗಳಿಗೆ ಸಾಕಷ್ಟು ಕಾರಣವಿಲ್ಲದೆ ಗೈರುಹಾಜರಾಗಿದ್ದಾನೆಂದು ಪರಿಷತ್ತು ಘೋಷಿಸಿದ್ದರೆ ಅಥವಾ ಅವನು ಯಾವುದೇ ವೃತ್ತೀಯ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನೆಂದು ಕಂಡುಬಂದಿದ್ದರೆ, ಜುಲ್ಮಾನೆಯ ದಂಡನೆಯನ್ನು ವಿಧಿಸಿದ್ದರೆ ಅಥವಾ ಯಾವುದೇ ಕಾರಣಕ್ಕಾಗಿ ಅವನ ಹೆಸರನ್ನು 24 ಮತ್ತು 30ನೇ ಪ್ರಕರಣಗಳ ಉಪಬಂಧಗಳ ಮೇರೆಗೆ ರಿಜಿಸ್ಟರಿನಿಂದ ತೆಗೆದುಹಾಕಿದ್ದರೆ, ಅವನು ತನ್ನ ಸ್ಥಾನವನ್ನು ತೆರವುಗೊಳಿಸಿರುವುದಾಗಿ ಭಾವಿಸತಕ್ಕದ್ದು.

(3) ಪರಿಷತ್ತಿನ ಸದಸ್ಯನ ಪದದ ಆಕಸ್ಮಿಕ ಖಾಲಿಸ್ಥಾನವನ್ನು, ಕೇಂದ್ರ ಸರ್ಕಾರವು, ಸಂದರ್ಭಾನುಸಾರ, ಹೊಸ ಚುನಾವಣೆಯ ಮೂಲಕ ಅಥವಾ ನಾಮ ನಿರ್ದೇಶನದ ಮೂಲಕ ತುಂಬತಕ್ಕದ್ದು ಮತ್ತು ಆ ಖಾಲಿಸ್ಥಾನವನ್ನು ತುಂಬುವುದಕ್ಕೆ ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ವ್ಯಕ್ತಿಯು, ಯಾವ ಸ್ಥಾನದಲ್ಲಿ ಅವನು ಚುನಾಯಿತನಾಗಿದ್ದಾನೋ ಅಥವಾ ನಾಮನಿರ್ದೇಶಿತನಾಗಿದ್ದಾನೋ ಆ ಸದಸ್ಯನು ಯಾವ ಅವಧಿಯವರೆಗೆ ಆ ಪದವನ್ನು ಧಾರಣ ಮಾಡುತ್ತಿದ್ದನೋ ಆ ಅವಧಿಯ ಉಳಿದ ಅವಧಿಗೆ ಮಾತ್ರ ಪದವನ್ನು ಧಾರಣ ಮಾಡತಕ್ಕದ್ದು:

ಪರಂತು, ಅಂಥ ಸದಸ್ಯನ ಪದಾವಧಿಯ ಮುಕ್ತಾಯದ ದಿನಾಂಕಕ್ಕೆ ಮುಂಚಿನ ಒಂದು ವರ್ಷದೊಳಗೆ ಸಂಭವಿಸುವ ಆಕಸ್ಮಿಕ ಖಾಲಿಸ್ಥಾನವನ್ನು ತುಂಬಲು ಚುನಾವಣೆಯನ್ನು ನಡೆಸತಕ್ಕದ್ದಲ್ಲ.

(4) ಪರಿಷತ್ತು ಮಾಡಿದ ಯಾವುದೇ ಕಾರ್ಯವನ್ನು, ಕೇವಲ ಅದರಲ್ಲಿ ಖಾಲಿಸ್ಥಾನವು ಇರುವ ಅಥವಾ ಪರಿಷತ್ತಿನ ರಚನೆಯಲ್ಲಿ ದೋಷ ಇರುವ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

**19. ಪರಿಷತ್ತಿನ ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವ ಕರ್ತವ್ಯವು ಪರಿಷತ್ತಿನಲ್ಲಿ ನಿಹಿತವಾಗಿರತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಪರಿಷತ್ತಿನ ಪ್ರಕಾರ್ಯಗಳು,–

(ಎ) ಪಟ್ಟಿಯಲ್ಲಿ ಸೇರಿಸುವುದಕ್ಕಾಗಿ ಅಭ್ಯರ್ಥಿಗಳ ಪರೀಕ್ಷೆಯನ್ನು ನಡೆಸುವುದು ಮತ್ತು ಅದಕ್ಕಾಗಿ ಫೀಜನ್ನು ನಿಗದಿಪಡಿಸುವುದು;

(ಬಿ) ರಿಜಿಸ್ಟರಿನಲ್ಲಿ ನಮೂದಿಸುವುದಕ್ಕೆ ಅರ್ಹತೆಗಳನ್ನು ನಿಗದಿಪಡಿಸುವುದು;

(ಸಿ) ವಿದೇಶೀ ಅರ್ಹತೆಗಳನ್ನು ಅಂಗೀಕರಿಸುವುದು ಮತ್ತು ಪಟ್ಟಿಯಲ್ಲಿ ಸೇರುವ ಉದ್ದೇಶಗಳಿಗಾಗಿ ತರಬೇತಿ ನೀಡುವುದು;

(ಡಿ) ಈ ಅಧಿನಿಯಮದ ಮೇರೆಗೆ ವೃತ್ತಿ ನಡೆಸಲು ಪ್ರಮಾಣಪತ್ರವನ್ನು ನೀಡುವುದು ಅಥವಾ ನೀಡಲು ನಿರಾಕರಿಸುವುದು;

(ಇ) ವಿಮಾ ತಜ್ಞರಾಗಿ ವೃತ್ತಿ ನಡೆಸಲು ಅರ್ಹತೆಯುಳ್ಳ ವ್ಯಕ್ತಿಗಳ ರಿಜಿಸ್ಟರನ್ನು ಇಟ್ಟುಕೊಂಡು ಬರುವುದು ಮತ್ತು ಪ್ರಕಟಿಸುವುದು;

(ಎಫ್) ಸದಸ್ಯರಿಗೆ, ವಿದ್ಯಾರ್ಥಿಗಳಿಗೆ, ಪರೀಕ್ಷಾರ್ಥಿಗಳಿಗೆ ಮತ್ತು ಇತರ ವ್ಯಕ್ತಿಗಳಿಗೆ ಫೀಜನ್ನು ವಿಧಿಸುವುದು ಮತ್ತು ಅವರಿಂದ ಸಂಗ್ರಹಿಸುವುದು;

(ಜಿ) ರಿಜಿಸ್ಟರಿನಿಂದ ಹೆಸರುಗಳನ್ನು ತೆಗೆದುಹಾಕುವುದು ಮತ್ತು ತೆಗೆದುಹಾಕಿರುವ ಹೆಸರುಗಳನ್ನು ರಿಜಿಸ್ಟರಿಗೆ ಮತ್ತೆ ಸೇರಿಸುವುದು;

(ಹೆಚ್) ಸಂಸ್ಥೆಯ ಸದಸ್ಯರ ವೃತ್ತೀಯ ಅರ್ಹತೆಗಳ ಸ್ಥಾನಮಾನ ಮತ್ತು ಗುಣಮಟ್ಟವನ್ನು ವಿನಿಯಮಿಸುವುದು ಮತ್ತು ನಿರ್ವಹಿಸುವುದು;

(ಐ) ವಿದ್ಯಾರ್ಥಿ ಸದಸ್ಯರೂ ಸೇರಿದಂತೆ, ಸದಸ್ಯರು ಪಾಲಿಸುವುದಕ್ಕಾಗಿ ಮಾರ್ಗದರ್ಶಕ ಸೂತ್ರಗಳನ್ನು ಹೊರಡಿಸುವುದು;

(ಜೆ) ಸಂದರ್ಭಾನುಸಾರ, ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ಕಾಣಿಕೆಗಳನ್ನು, ಅನುದಾನಗಳನ್ನು, ದೇಣಿಗೆಗಳನ್ನು ಅಥವಾ ಉಪಕಾರ ಧನಗಳನ್ನು ಪಡೆಯುವುದು ಮತ್ತು ಮರಣ ಶಾಸನಕರ್ತರು, ದಾನಿಗಳು ಅಥವಾ ವರ್ಗಾವಣೆದಾರರಿಂದ ಚರ ಮತ್ತು ಸ್ಥಿರ ಸ್ವತ್ತುಗಳ ಮರಣ ಶಾಸನದಾನಗಳನ್ನು, ದೇಣಿಗೆಗಳನ್ನು ಮತ್ತು ವರ್ಗಾವಣೆಯನ್ನು ಪಡೆಯುವುದು;

(ಕೆ) ಸಂಸ್ಥೆಯ ಉದ್ದೇಶಗಳಿಗೆ ಸಂಪೂರ್ಣವಾಗಿ ಅಥವಾ ಭಾಗಶಃ ಸಂವಾದಿಯಾದ ಉದ್ದೇಶಗಳನ್ನು ಹೊಂದಿರುವ ವಿಶ್ವದ ಯಾವುದೇ ಭಾಗದಲ್ಲಿರುವ ಶೈಕ್ಷಣಿಕ ಅಥವಾ ಇತರ ಸಂಸ್ಥೆಗಳೊಂದಿಗೆ, ಸದಸ್ಯರನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಮತ್ತು ಸಾಮಾನ್ಯವಾಗಿ ಅವರ ಒಂದೇ ಬಗೆಯ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದಕ್ಕೆ ಸಹಾಯಕವಾಗಬಹುದಾದಂಥ ರೀತಿಯಲ್ಲಿ ಸಹಕರಿಸುವುದು;

(ಎಲ್) ಫೆಲೋಶಿಪ್‌ಗಳು, ಸ್ಕಾಲರ್‌ಷಿಪ್‌ಗಳು, ಬಹುಮಾನಗಳು ಮತ್ತು ಪದಕಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(ಎಂ) ಸಂಸ್ಥೆಯ ಉದ್ದೇಶಗಳಿಗೆ ಸಂವಾದಿಯಾದ ಉದ್ದೇಶಗಳನ್ನು ಹೊಂದಿರುವ ಇತರ ಸಂಸ್ಥೆಗಳಿಗೆ ಅಥವಾ ನಿಕಾಯಗಳಿಗೆ ಕಾಣಿಕೆಗಳನ್ನು, ಅನುದಾನಗಳನ್ನು, ದೇಣಿಗೆಗಳನ್ನು ಅಥವಾ ಉಪಕಾರ ಧನಗಳನ್ನು ನೀಡುವುದು;

(ಎನ್) ಪರಿಷತ್ತಿನ ಸದಸ್ಯರನ್ನು ಹೊರತು ಪಡಿಸಿ ಇತರ ವ್ಯಕ್ತಿಗಳಿಗೆ ಹಣಕಾಸಿನ ನೆರವನ್ನು ನೀಡುವ ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ವಿಮಾ ತಜ್ಞತೆ ವಿಜ್ಞಾನದಲ್ಲಿ ಸಂಶೋಧನೆ ನಡೆಸುವುದು;

(ಓ) ವಿಮಾ ತಜ್ಞತೆ ವಿಜ್ಞಾನಕ್ಕೆ ಸಂಬಂಧಿಸಿದಂತೆ ಗ್ರಂಥಾಲಯವನ್ನು ನಿರ್ವಹಿಸುವುದು ಮತ್ತು ಪುಸ್ತಕಗಳನ್ನು, ಪತ್ರಿಕೆಗಳನ್ನು ಮತ್ತು ನಿಯತಕಾಲಿಕಗೆಳನ್ನು ಪ್ರಕಟಿಸುವುದು;

(ಪಿ) ಈ ಅಧಿನಿಯಮದ ಮೂಲಕ ಪ್ರದತ್ತವಾದ ಶಿಸ್ತು ಸಂಬಂಧಿತ ಅಧಿಕಾರಗಳನ್ನು ಚಲಾಯಿಸುವುದು;

(ಕ್ಯೂ) ಕಾಲಕಾಲಕ್ಕೆ ತೀರ್ಮಾನಿಸಬಹುದಾದಂತೆ ಪ್ರಾದೇಶಿಕ ಪರಿಷತ್ತನ್ನು ಅಥವಾ ಪರಿಷತ್ತುಗಳನ್ನು ಸ್ಥಾಪಿಸುವುದು ಹಾಗೂ ಅವುಗಳ ಪ್ರಧಾನ ಕಚೇರಿಗಳನ್ನು ನಿಗದಿಪಡಿಸುವುದು; ಮತ್ತು

(ಆರ್) ಸಂಸ್ಥೆಯ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಸಾಧಿಸುವುದಕ್ಕೆ ಅಗತ್ಯವಾದ ಪ್ರಾಸಂಗಿಕವಾದ ಅಥವಾ ಸಹಾಯಕವಾದಂಥ ಎಲ್ಲಾ ಕಾರ್ಯಗಳನ್ನು ಮಾಡುವುದು

– ಇವುಗಳನ್ನು ಒಳಗೊಳ್ಳತಕ್ಕದ್ದು.

**20. ಸಿಬ್ಬಂದಿ ವರ್ಗ, ಪರಿಶ್ರಮಧನ ಮತ್ತು ಭತ್ಯೆಗಳು.–** (1) ಪರಿಷತ್ತು, ತನ್ನ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವುದಕ್ಕೆ ನಿರ್ದಿಷ್ಟ ಪಡಿಸಬಹುದಾದ ರೀತಿಯಲ್ಲಿ,–

(ಎ) ಒಬ್ಬ ಕಾರ್ಯನಿರ್ವಾಹಕ ನಿರ್ದೇಶಕನನ್ನು, ಒಬ್ಬ ಖಜಾಂಚಿಯನ್ನು ಮತ್ತು ಅದು ಅಗತ್ಯವೆಂದು ಭಾವಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು

ನೌಕರರನ್ನು ನೇಮಿಸಬಹುದು ಮತ್ತು ಅವರ ವೇತನಗಳು, ಫೀಜುಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳನ್ನು ನಿಗದಿಪಡಿಸಬಹುದು; ಮತ್ತು

(ಬಿ) ಅಧ್ಯಕ್ಷ, ಉಪಾಧ್ಯಕ್ಷ, ಗೌರವ ಕಾರ್ಯದರ್ಶಿ ಮತ್ತು ಪರಿಷತ್ತಿನ ಹಾಗೂ ಅದರ ಸಮಿತಿಗಳ ಇತರ ಸದಸ್ಯರ ಭತ್ಯೆಗಳನ್ನು ನಿಗದಿಪಡಿಸಬಹುದು.

(2) ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕನು ಪರಿಷತ್ತಿನ ಸಭೆಗಳಲ್ಲಿ ಭಾಗವಹಿಸಲು ಹಕ್ಕುಳ್ಳವನಾಗಿರತಕ್ಕದ್ದು, ಆದರೆ ಅದರಲ್ಲಿ ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**21. ಪರಿಷತ್ತಿನ ಸಮಿತಿಗಳು.–** (1) ಪರಿಷತ್ತು ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸುವ ಉದ್ದೇಶಕ್ಕಾಗಿ ಅಗತ್ಯವೆಂದು ಭಾವಿಸಬಹುದಾದಂಥ ಸಮಿತಿಗಳನ್ನು ತನ್ನ ಸದಸ್ಯರೊಳಗಿಂದ ರಚಿಸಿಕೊಳ್ಳಬಹುದು ಮತ್ತು ಅದರಲ್ಲಿ ಸಂಸ್ಥೆಯ ಸದಸ್ಯರಲ್ಲದ ವ್ಯಕ್ತಿಗಳನ್ನು ಸಹ–ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು:

ಪರಂತು, ಸೇರಿಸಿಕೊಂಡ ಸಹ – ಸದಸ್ಯರ ಸಂಖ್ಯೆಯು ಸಮಿತಿಯ ಒಟ್ಟು ಸದಸ್ಯತ್ವದ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಸಮಿತಿಯು ತನ್ನದೇ ಅಧ್ಯಕ್ಷನನ್ನು ಚುನಾಯಿಸಿಕೊಳ್ಳತಕ್ಕದ್ದು:

ಪರಂತು,–

(i) ಅಧ್ಯಕ್ಷನು ಆ ಸಮಿತಿಯ ಒಬ್ಬ ಸದಸ್ಯನಾಗಿದ್ದಲ್ಲಿ, ಅವನು ಅಂಥ ಸಮಿತಿಯ ಪೀಠಾಧ್ಯಕ್ಷನಾಗಿರತಕ್ಕದ್ದು ಮತ್ತು ಅವನು ಗೈರು ಹಾಜರಾಗಿದ್ದಲ್ಲಿ, ಉಪಾಧ್ಯಕ್ಷನು ಆ ಸಮಿತಿಯ ಸದಸ್ಯನಾಗಿದ್ದರೆ, ಅವನು ಅದರ ಪೀಠಾಧ್ಯಕ್ಷನಾಗಿರತಕ್ಕದ್ದು; ಮತ್ತು

(ii) ಅಧ್ಯಕ್ಷನು ಆ ಸಮಿತಿಯ ಸದಸ್ಯನಾಗಿಲ್ಲದಿದ್ದಲ್ಲಿ, ಆದರೆ ಉಪಾಧ್ಯಕ್ಷನು ಅದರ ಸದಸ್ಯನಾಗಿದ್ದಲ್ಲಿ, ಆ ಉಪಾಧ್ಯಕ್ಷನು ಅದರ ಪೀಠಾಧ್ಯಕ್ಷನಾಗಿರತಕ್ಕದ್ದು.

(3) ಸಮಿತಿಗಳು, ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ನಿರ್ದಿಷ್ಟಪಡಿಸ ಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**22. ಪರಿಷತ್ತಿನ ಹಣಕಾಸು.–** (1) ಪರಿಷತ್ತಿನ ವ್ಯವಸ್ಥಾಪನೆಯ ಮತ್ತು ನಿಯಂತ್ರಣದ ಅಡಿಯಲ್ಲಿ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು, ಪರಿಷತ್ತು ಸ್ವೀಕರಿಸಿದ (ದೇಣಿಗೆಗಳು ಮತ್ತು ಅನುದಾನಗಳೂ ಸೇರಿದಂತೆ) ಎಲ್ಲಾ ಹಣವನ್ನು ಅದಕ್ಕೆ ಜಮೆ ಮಾಡತಕ್ಕದ್ದು ಮತ್ತು ಪರಿಷತ್ತು ಮಾಡಿದ ಎಲ್ಲಾ ವೆಚ್ಚಗಳನ್ನು ಮತ್ತು ವಹಿಸಿದ ಎಲ್ಲ ಹೊಣೆಗಾರಿಕೆಗಳನ್ನು ನಿಧಿಯಿಂದ ಭರಿಸತಕ್ಕದ್ದು.

(2) ಪರಿಷತ್ತು, ತತ್ಕಾಲದಲ್ಲಿ ನಿಧಿಗೆ ಜಮೆಯಾಗಿರುವ ಯಾವುದೇ ಹಣವನ್ನು, ಹೂಡಿಕೆಗಳ ಭದ್ರತೆಯ ಪ್ರತಿಫಲ ಮತ್ತು ಅದರ ಮೇಲಿನ ಗರಿಷ್ಠ ವರಮಾನಗಳೊಂದಿಗೆ ಸುಸಂಗತವಾಗುವ ಅದು ವಿವೇಕಯುತವೆಂದು ಭಾವಿಸಬಹುದಾದಂಥ ಯಾವುದೇ ಭದ್ರತೆಯಲ್ಲಿ ತೊಡಗಿಸಬಹುದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಭದ್ರತೆಗಳು" ಎಂಬ ಪದಾವಳಿಯು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಭದ್ರತೆಗಳ ಕರಾರುಗಳ (ವಿನಿಯಮನ) ಅಧಿನಿಯಮ, 1956 (1956ರ 42)ರ 2ನೇ ಪ್ರಕರಣದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು.

(3) ರಾಜಸ್ವ ಲೆಕ್ಕದಿಂದ ಬಂಡವಾಳ ಲೆಕ್ಕವನ್ನು ಪ್ರತ್ಯೇಕಿಸುವ ನಿಧಿಯ ಸೂಕ್ತ ಲೆಕ್ಕಪತ್ರಗಳನ್ನು ಪರಿಷತ್ತು ಇಟ್ಟುಕೊಂಡು ಬರತಕ್ಕದ್ದು.

(4) ಸಂಸ್ಥೆಯ ವಾರ್ಷಿಕ ಲೆಕ್ಕಪತ್ರಗಳು ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949 (1949ರ 38)ರ ಅರ್ಥ ವ್ಯಾಪ್ತಿಯಲ್ಲಿ ಪರಿಷತ್ತು ವಾರ್ಷಿಕವಾಗಿ ನೇಮಕ ಮಾಡುವ ಚಾರ್ಟರ್ಡ್ ಅಕೌಂಟೆಂಟ್ ವೃತ್ತಿ ನಡೆಸುತ್ತಿರುವವನು ಲೆಕ್ಕಪರಿಶೋಧನೆ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು:

ಪರಂತು, ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಪರಿಷತ್ತಿನ ಸದಸ್ಯನು ಅಥವಾ ಅಂಥ ಸದಸ್ಯನೊಂದಿಗೆ ಪಾಲುದಾರನಾಗಿರುವ ವ್ಯಕ್ತಿಯು ಈ ಉಪ ಪ್ರಕರಣದ ಮೇರೆಗೆ ಲೆಕ್ಕಪರಿಶೋಧಕನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(5) ಪ್ರತಿ ವರ್ಷದ ಕೊನೆಯಲ್ಲಿ ಕಾರ್ಯಸಾಧ್ಯವಾಗಬಹುದಾದಷ್ಟು ಬೇಗನೆ, ಆದರೆ ಅದರ ತರುವಾಯದ ವರ್ಷದ ಸೆಪ್ಟೆಂಬರ್ ತಿಂಗಳ 30ನೇ ದಿನವನ್ನು ಮೀರದಂತೆ, ಪರಿಷತ್ತು, ಆ ವರ್ಷದ ಪರಿಷತ್ತಿನ ಪರಿಶೋಧಿತ ಲೆಕ್ಕಪತ್ರಗಳ ಮತ್ತು ವರದಿಯ ಒಂದು ಪ್ರತಿಯನ್ನು ಭಾರತ ರಾಜಪತ್ರದಲ್ಲಿ ಪ್ರಕಟವಾಗುವಂತೆ ಮಾಡತಕ್ಕದ್ದು ಮತ್ತು ಸದರಿ ಲೆಕ್ಕಪತ್ರಗಳ ಮತ್ತು ವರದಿಯ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಹಾಗೂ ಸಂಸ್ಥೆಯ ಸದಸ್ಯರಿಗೆ ಕಳುಹಿಸತಕ್ಕದ್ದು.

(6) ಪರಿಷತ್ತು, ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2) ರಲ್ಲಿ ಪರಿಭಾಷಿಸಿದಂತೆ ಅನುಸೂಚಿತ ಬ್ಯಾಂಕಿನಿಂದ ಅಥವಾ ಯಾವುದೇ ಸಾರ್ವಜನಿಕ ಹಣಕಾಸು ಸಂಸ್ಥೆಯಿಂದ,–

(ಎ) ನಿಧಿಯ ಭದ್ರತೆಯ ಮೇಲೆ ಅಥವಾ ತತ್ಕಾಲದಲ್ಲಿ ಅದರ ವಶದಲ್ಲಿರುವ ಯಾವುದೇ ಇತರ ಆಸ್ತಿಯ ಭದ್ರತೆಯ ಮೇಲೆ, ಬಂಡವಾಳ ಲೆಕ್ಕದ ಮೇಲಿನ ಅದರ ಹೊಣೆಗಾರಿಕೆಗಳನ್ನು ನಿಭಾಯಿಸುವುದಕ್ಕಾಗಿ ಅಗತ್ಯವಾದ ಯಾವುದೇ ಹಣವನ್ನು; ಅಥವಾ

(ಬಿ) ಆದಾಯ ಸ್ವೀಕೃತಿಯನ್ನು ನಿರೀಕ್ಷಿಸಿ ಪ್ರಸ್ತುತದ ಹೊಣೆಗಾರಿಕೆಗಳನ್ನು ನಿಭಾಯಿಸುವ ಉದ್ದೇಶಕ್ಕಾಗಿ, ತಾತ್ಕಾಲಿಕ ಸಾಲ ಅಥವಾ ಓವರ್‌ಡ್ರಾಫ್ಟ್ ರೂಪದಲ್ಲಿ

– ಸಾಲ ಪಡೆಯಬಹುದು.

**ವಿವರಣೆ:–** "ಸಾರ್ವಜನಿಕ ಹಣಕಾಸು ಸಂಸ್ಥೆ" ಎಂಬ ಅಭಿವ್ಯಕ್ತಿಗೆ, ಕಂಪನಿಗಳ ಅಧಿನಿಯಮ, 1956 (1956ರ 1)ರ 4ಎ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಹಣಕಾಸು ಸಂಸ್ಥೆ ಎಂದು ಅರ್ಥ.

## ಅಧ್ಯಾಯ –III
## ಸದಸ್ಯರ ರಿಜಿಸ್ಟರು

**23. ರಿಜಿಸ್ಟರು.–** (1) ಪರಿಷತ್ತು, ಸಂಸ್ಥೆಯ ಸದಸ್ಯರ ರಿಜಿಸ್ಟರನ್ನು, ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಇಟ್ಟುಕೊಂಡು ಬರತಕ್ಕದ್ದು.

(2) ರಿಜಿಸ್ಟರು, ಸಂಸ್ಥೆಯ ಪ್ರತಿಯೊಬ್ಬ ಸದಸ್ಯರಿಗೆ ಸಂಬಂಧಿಸಿದ ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಅವನ ಪೂರ್ಣವಿಳಾಸ, ಜನ್ಮ ದಿನಾಂಕ, ಅಧಿವಾಸ, ವಾಸಸ್ಥಳದ ಮತ್ತು ವೃತ್ತಿ ಸ್ಥಳದ ವಿಳಾಸಗಳು;

(ಬಿ) ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದಿಸಿದ ದಿನಾಂಕ;

(ಸಿ) ಅವನ ಅರ್ಹತೆಗಳು;

(ಡಿ) ವೃತ್ತಿ ನಡೆಸುವ ಪ್ರಮಾಣಪತ್ರವನ್ನು ಅವನು ಪಡೆದಿದ್ದಾನೆಯೇ; ಮತ್ತು

(ಇ) ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ವಿವರಗಳು.

(3) ಪರಿಷತ್ತು, ಪ್ರತಿ ವರ್ಷ ಏಪ್ರಿಲ್ ತಿಂಗಳ 1ನೇ ದಿನದಂದು ಇದ್ದಂತೆ, ಸದಸ್ಯರ ಪಟ್ಟಿಯನ್ನು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು, ಮತ್ತು ಅಂಥ ಯಾರೇ ಸದಸ್ಯನು ಆ ಪಟ್ಟಿಯ ಪ್ರತಿಯನ್ನು ಕೋರಿದರೆ, ನಿರ್ದಿಷ್ಟಪಡಿಸಬಹುದಾದಂಥ ಮೊಬಲಗನ್ನು ಸಂದಾಯ ಮಾಡಿದ ಮೇಲೆ, ಅವನಿಗೆ ಅಂಥ ಪಟ್ಟಿಯ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

(4) ಸಂಸ್ಥೆಯ ಪ್ರತಿಯೊಬ್ಬ ಸದಸ್ಯನು, ರಿಜಿಸ್ಟರಿನಲ್ಲಿ ಅವನ ಹೆಸರು ನಮೂದಾದ ಮೇಲೆ, ಪರಿಷತ್ತು ನಿರ್ದಿಷ್ಟಪಡಿಸಬಹುದಾದಂಥ ವಾರ್ಷಿಕ ಸದಸ್ಯತ್ವದ ಫೀಜನ್ನು ಸಂದಾಯ ಮಾಡತಕ್ಕದ್ದು.

**24. ರಿಜಿಸ್ಟರಿನಿಂದ ಹೆಸರನ್ನು ತೆಗೆದುಹಾಕುವುದು:–** ಪರಿಷತ್ತು,–

(ಎ) ಮೃತನಾಗಿರುವ; ಅಥವಾ

(ಬಿ) ಹೆಸರನ್ನು ತೆಗೆದುಹಾಕುವಂತೆ ಕೋರಿಕೆಯನ್ನು ಸಲ್ಲಿಸಿರುವ; ಅಥವಾ

(ಸಿ) ಅವನು ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ ಯಾವುದೇ ನಿರ್ದಿಷ್ಟಪಡಿಸಲಾದ ಫೀಜನ್ನು ಸಂದಾಯ ಮಾಡಿಲ್ಲದ; ಅಥವಾ

(ಡಿ) ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದಿಸುವ ಕಾಲದಲ್ಲಿ 11ನೇ ಪ್ರಕರಣದಲ್ಲಿ ನಮೂದಿಸಿದ ಅನರ್ಹತೆಗಳಲ್ಲಿ ಯಾವುದೇ ಅನರ್ಹತೆಗೆ ಒಳಪಟ್ಟಿದ್ದಾನೆಂದು ಕಂಡು ಬಂದ ಅಥವಾ ತದನಂತರ ಯಾವುದೇ ಕಾಲದಲ್ಲಿ ಅದಕ್ಕೆ ಒಳಪಟ್ಟಿರುವ; ಅಥವಾ

(ಇ) ಯಾವುದೇ ಇತರ ಕಾರಣಕ್ಕಾಗಿ, ರಿಜಿಸ್ಟರಿನಲ್ಲಿ ತನ್ನ ಹೆಸರು ಇರಲು ಹಕ್ಕು ಹೊಂದಿರುವುದು ನಿಂತು ಹೋಗಿರುವ

– ಸಂಸ್ಥೆಯ ಯಾರೇ ಸದಸ್ಯನ ಹೆಸರನ್ನು ಆದೇಶದ ಮೂಲಕ ರಿಜಿಸ್ಟರಿನಿಂದ ತೆಗೆದುಹಾಕಬಹುದು.

**25. ರಿಜಿಸ್ಟರಿನಲ್ಲಿ ಪನಃ ನಮೂದನೆ.–** ಪರಿಷತ್ತು, 24ನೇ ಪ್ರಕರಣದ (ಬಿ), (ಸಿ), (ಡಿ) ಮತ್ತು (ಇ) ಖಂಡಗಳಲ್ಲಿ ನಮೂದಿಸಿದ ಕಾರಣಗಳಿಗಾಗಿ ಯಾರ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಲಾಗಿದೆಯೋ ಆ ಸದಸ್ಯನ ಹೆಸರನ್ನು, ಆದೇಶದ ಮೂಲಕ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಮತ್ತು ಅಂಥ ಷರತ್ತುಗಳನ್ನು ಮತ್ತು ಅಗತ್ಯತೆಗಳನ್ನು ಪೂರೈಸಿದ ನಂತರ, ಪುನಃ ನಮೂದಿಸಬಹುದು.

## ಅಧ್ಯಾಯ – IV
## ದುರ್ನಡತೆ

**26. ಶಿಸ್ತು ಸಮಿತಿ.–** (1) ಪರಿಷತ್ತು, ಪೀಠಾಸೀನ ಅಧಿಕಾರಿಯಾಗಿ ಪರಿಷತ್ತಿನ ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಮತ್ತು ಪರಿಷತ್ತಿನಿಂದ ಚುನಾಯಿತರಾದ ಪರಿಷತ್ತಿನ ಇಬ್ಬರು ಸದಸ್ಯರನ್ನು ಮತ್ತು ಕಾನೂನು, ಶಿಕ್ಷಣ, ಅರ್ಥಶಾಸ್ತ್ರ, ವ್ಯವಹಾರ, ಹಣಕಾಸು, ಲೆಕ್ಕಶಾಸ್ತ್ರ ಅಥವಾ ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಖ್ಯಾತ ವ್ಯಕ್ತಿಗಳಿಂದ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ಇಬ್ಬರು ಸದಸ್ಯರನ್ನು ಒಳಗೊಂಡ ಒಂದು ಶಿಸ್ತು ಸಮಿತಿಯನ್ನು ರಚಿಸತಕ್ಕದ್ದು:

ಪರಂತು, ಪರಿಷತ್ತು ತಾನು ಸೂಕ್ತವೆಂದು ಭಾವಿಸಿದಾಗಲೆಲ್ಲಾ ಹೆಚ್ಚಿನ ಪ್ರಾದೇಶಿಕ ಶಿಸ್ತು ಸಮಿತಿಗಳನ್ನು ರಚಿಸಬಹುದು.

(2) ಶಿಸ್ತು ಸಮಿತಿಯು ಈ ಅಧಿನಿಯಮದ ಉಪಬಂಧಗಳ ಮೇರೆಗೆ ವಿಚಾರಣೆ ಮಾಡುವಾಗ ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ಕಾಲದೊಳಗೆ ಪರಿಷತ್ತಿಗೆ ವರದಿಯನ್ನು ಸಲ್ಲಿಸತಕ್ಕದ್ದು.

**27. ಪ್ರಾಸಿಕ್ಯೂಷನ್ ನಿರ್ದೇಶಕರ ನೇಮಕ.–** (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ, ಪರಿಷತ್ತು ಸ್ವೀಕರಿಸಿದ ಯಾವುದೇ ಮಾಹಿತಿಗೆ ಅಥವಾ ದೂರಿಗೆ ಸಂಬಂಧಿಸಿದ ವಿಚಾರಣೆಗಳನ್ನು ಮಾಡುವಾಗ ಶಿಸ್ತು ಸಮಿತಿಗೆ ನೆರವಾಗಲು ಪರಿಷತ್ತು, ಅಧಿಸೂಚನೆಯ ಮೂಲಕ, ಪ್ರಾಸಿಕ್ಯೂಷನ್ ನಿರ್ದೇಶಕರನ್ನು ಮತ್ತು ಅಂಥ ಇತರ ನೌಕರರನ್ನು ನೇಮಿಸಬಹುದು.

(2) ಈ ಅಧಿನಿಯಮದ ಉಪಬಂಧಗಳ ಮೇರೆಗೆ ವಿಚಾರಣೆಗಳನ್ನು ಮಾಡುವ ಸಲುವಾಗಿ, ಪ್ರಾಸಿಕ್ಯೂಷನ್ ನಿರ್ದೇಶಕರು, ನಿಯಮಿಸಬಹುದಾದಂಥ ಕಾರ್ಯವಿಧಾನಗಳನ್ನು ಅನುಸರಿಸತಕ್ಕದ್ದು.

**28. ಪ್ರಾಧಿಕಾರ, ಪರಿಷತ್ತು, ಶಿಸ್ತು ಸಮಿತಿ ಮತ್ತು ಪ್ರಾಸಿಕ್ಯೂಷನ್ ನಿರ್ದೇಶಕನು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ವಿಚಾರಣೆ ನಡೆಸುವ ಉದ್ದೇಶಗಳಿಗಾಗಿ, ಪ್ರಾಧಿಕಾರವು, ಶಿಸ್ತು ಸಮಿತಿಯು ಮತ್ತು ಪ್ರಾಸಿಕ್ಯೂಷನ್ ನಿರ್ದೇಶಕನು, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಅವನನ್ನು ಪ್ರಮಾಣದ ಮೇಲೆ ವಿಚಾರಣೆ ಮಾಡುವುದು;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸುವುದು ಮತ್ತು ಹಾಜರುಪಡಿಸುವುದು; ಮತ್ತು

(ಸಿ) ಅಫಿಡಾವಿಟ್ಟಿನ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು.

**29. ಶಿಸ್ತು ಸಮಿತಿಯ ವರದಿಯ ಮೇಲೆ ಪರಿಷತ್ತು ಕ್ರಮಕೈಗೊಳ್ಳುವುದು.–** (1) ಶಿಸ್ತು ಸಮಿತಿಯಿಂದ ವರದಿಯನ್ನು ಸ್ವೀಕರಿಸಿದ ನಂತರ, ಸಂಸ್ಥೆಯ ಸದಸ್ಯನು ಯಾವುದೇ ವೃತ್ತೀಯ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನೆಂದು ಪರಿಷತ್ತಿಗೆ ಮನದಟ್ಟಾದರೆ, ತದನುಸಾರವಾಗಿ ಅದು ತನ್ನ ನಿರ್ಣಯಗಳನ್ನು ದಾಖಲಿಸತಕ್ಕದ್ದು ಮತ್ತು 30ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಮುಂದುವರಿಯತಕ್ಕದ್ದು.

(2) ಶಿಸ್ತು ಸಮಿತಿಯ ವರದಿಯಿಂದ ಪರಿಷತ್ತಿಗೆ ತೃಪ್ತಿಯಾಗದಿದ್ದ ಸಂದರ್ಭದಲ್ಲಿ ಮತ್ತು ಅದಕ್ಕೆ ಹೆಚ್ಚಿನ ವಿಚಾರಣೆ ಅಗತ್ಯವಿದೆಯೆಂದು ಅದು ಅಭಿಪ್ರಾಯಪಟ್ಟ ಸಂದರ್ಭದಲ್ಲಿ, ಪರಿಷತ್ತಿನ ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಹೆಚ್ಚಿನ ವಿಚಾರಣೆಗಾಗಿ ವರದಿಯನ್ನು ಅದು ಶಿಸ್ತು ಸಮಿತಿಗೆ ಪುನಃ ಕಳುಹಿಸಬಹುದು.

(3) ಪರಿಷತ್ತು, ಶಿಸ್ತು ಸಮಿತಿಯ ನಿರ್ಣಯಗಳಿಗೆ ಅಸಮ್ಮತಿ ಸೂಚಿಸಿದರೆ, ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಲು ಅದು ಪ್ರಾಸಿಕ್ಯೂಷನ್ ನಿರ್ದೇಶಕನಿಗೆ ನಿರ್ದೇಶನ ನೀಡಬಹುದು ಅಥವಾ ತಾನೇ ಸ್ವತಃ ಅಪೀಲು ಸಲ್ಲಿಸಬಹುದು.

**30. ಸದಸ್ಯರಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡುವುದು.–** ಸದಸ್ಯನು ಅನುಸೂಚಿಯಲ್ಲಿ ತಿಳಿಸಿದ ವೃತ್ತೀಯ ಅಥವಾ ಇತರ ದುರ್ನಡತೆಯ ತಪ್ಪಿತಸ್ಥನೆಂದು ಪರಿಷತ್ತು ಅಭಿಪ್ರಾಯಪಟ್ಟಲ್ಲಿ, ಅದು ಅವನ ವಿರುದ್ಧ ಯಾವುದೇ ಆದೇಶವನ್ನು ಹೊರಡಿಸುವ ಮುಂಚೆ ಅಹವಾಲನ್ನು ಹೇಳಿಕೊಳ್ಳುವ ಒಂದು ಯುಕ್ತ ಅವಕಾಶವನ್ನು ಸದಸ್ಯನಿಗೆ ಒದಗಿಸತಕ್ಕದ್ದು ಮತ್ತು ತದನಂತರ ಈ ಕೆಳಕಂಡ ಯಾವುದೇ ಒಂದು ಅಥವಾ ಹೆಚ್ಚು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು, ಎಂದರೆ:–

(ಎ) ಸದಸ್ಯನಿಗೆ ವಾಗ್ದಂಡನೆ ವಿಧಿಸುವುದು; ಅಥವಾ

(ಬಿ) ಸದಸ್ಯನ ಹೆಸರನ್ನು ಶಾಶ್ವತವಾಗಿ ಅಥವಾ ಅದು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಗೆ ರಿಜಿಸ್ಟರಿನಿಂದ ತೆಗೆದುಹಾಕುವುದು.

(ಸಿ) ಅದು ಸೂಕ್ತವೆಂದು ಭಾವಿಸಬಹುದಾದಂತೆ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ, ಜುಲ್ಮಾನೆಯನ್ನು ವಿಧಿಸುವುದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ, "ಸಂಸ್ಥೆಯ ಸದಸ್ಯ" ಎಂಬುದರಲ್ಲಿ, ವಿಚಾರಣೆಯ ಕಾಲದಲ್ಲಿ ಸಂಸ್ಥೆಯ ಸದಸ್ಯನಾಗಿರುವುದು ನಿಂತು ಹೋಗಿದ್ದರೂ, ಆಪಾದಿಸಿದ ದುರ್ನಡತೆಯ ದಿನಾಂಕದಂದು ಸಂಸ್ಥೆಯ ಸದಸ್ಯನಾಗಿದ್ದ ವ್ಯಕ್ತಿಯೂ ಒಳಗೊಳ್ಳುತ್ತಾನೆ.

**31. ವೃತ್ತಿ ಸಂಬಂಧಿತ ದುರ್ನಡತೆಯನ್ನು ಅಥವಾ ಇತರ ದುರ್ನಡತೆಯನ್ನು ಪರಿಭಾಷಿಸಲಾಗಿದೆ.–** ಈ ಅಧಿನಿಯಮದ ಉದ್ದೇಶಗಳಿಗಾಗಿ, "ವೃತ್ತೀಯ ದುರ್ನಡತೆ ಅಥವಾ ಇತರ ದುರ್ನಡತೆ" ಎಂಬ ಪದಾವಳಿಯು, ಅನುಸೂಚಿಯಲ್ಲಿ ಉಪಬಂಧಿಸಿದ ಯಾವುದೇ ಕೃತ್ಯವನ್ನು ಅಥವಾ ಲೋಪವನ್ನು ಒಳಗೊಳ್ಳುತ್ತದೆ ಎಂದು ಭಾವಿಸತಕ್ಕದ್ದು, ಆದರೆ, ಈ ಪ್ರಕರಣದಲ್ಲಿರುವುದು ಯಾವುದೂ, ಯಾವುದೇ ಇತರ ಸಂದರ್ಭಗಳಲ್ಲಿ, ಸಂಸ್ಥೆಯ ಯಾರೇ ಸದಸ್ಯನ ನಡತೆಯ ಬಗ್ಗೆ ವಿಚಾರಣೆ ಮಾಡಲು ಶಿಸ್ತು ಸಮಿತಿಗೆ ಅಥವಾ ಪ್ರಾಸಿಕ್ಯೂಷನ್ ನಿರ್ದೇಶಕನಿಗೆ ಪ್ರದತ್ತವಾದ ಅಧಿಕಾರವನ್ನು ಅಥವಾ ವಿಧಿಸಿದ ಕರ್ತವ್ಯವನ್ನು ಯಾವುದೇ ರೀತಿಯಲ್ಲಿ ಪರಿಮಿತಿಗೊಳಿಸುತ್ತದೆಂದು ಅಥವಾ ಮೊಟಕುಗೊಳಿಸುತ್ತದೆಂದು ಅರ್ಥೈಸತಕ್ಕದ್ದಲ್ಲ.

## ಅಧ್ಯಾಯ –V
## ಅಪೀಲುಗಳು

**32. ಅಪೀಲು ಪ್ರಾಧಿಕಾರದ ರಚನೆ.–** ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949 (1949ರ 38)ರ 22ಎ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ರಚಿತವಾದ ಅಪೀಲು ಪ್ರಾಧಿಕಾರವನ್ನು, ಸದರಿ (1)ನೇ ಉಪಪ್ರಕರಣದ (ಬಿ) ಖಂಡದ ಬದಲಾಗಿ ಈ ಮುಂದಿನ ಖಂಡವನ್ನು ಸೇರಿಸಲಾಗಿದೆಯೆಂಬ ಮಾರ್ಪಾಡಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಪೀಲು ಪ್ರಾಧಿಕಾರವೆಂದು ಭಾವಿಸತಕ್ಕದ್ದು, ಎಂದರೆ:–

"(ಬಿ) ಕೊನೇಪಕ್ಷ ಒಂದು ಪೂರ್ಣಾವಧಿಯವರೆಗೆ ವಿಮಾ ತಜ್ಞರ ಸಂಸ್ಥೆಯ ಪರಿಷತ್ತಿನ ಸದಸ್ಯರಾಗಿದ್ದ ಮತ್ತು ಪರಿಷತ್ತಿನ ಹಾಲಿ ಸದಸ್ಯರಲ್ಲದ ವ್ಯಕ್ತಿಗಳ ಪೈಕಿ ಇಬ್ಬರು ಅರೆಕಾಲಿಕ ಸದಸ್ಯರನ್ನು ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ನೇಮಕ ಮಾಡತಕ್ಕದ್ದು;"

**33. ಪ್ರಾಧಿಕಾರದ ಸದಸ್ಯರ ಪದಾವಧಿ.–** ಸದಸ್ಯನಾಗಿ ನೇಮಕಗೊಂಡ ವ್ಯಕ್ತಿಯು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಅರವತ್ತೇಳು ವರ್ಷ ವಯಸ್ಸು ತುಂಬುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆ ಪದವನ್ನು ಧಾರಣ ಮಾಡಿರತಕ್ಕದ್ದು.

**34. ಪ್ರಾಧಿಕಾರದ ಸದಸ್ಯರ ಭತ್ಯೆಗಳು, ಸೇವಾ ಷರತ್ತುಗಳು ಮತ್ತು ಅದರ ಕಾರ್ಯವಿಧಾನ, ಇತ್ಯಾದಿ.–**ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949ರ 22 ಸಿ ಪ್ರಕರಣದ, 22ಡಿ ಪ್ರಕರಣದ ಮತ್ತು 22ಎಫ್ ಪ್ರಕರಣದ ಉಪಬಂಧಗಳು, ಪ್ರಾಧಿಕಾರದ ಅಧ್ಯಕ್ಷನ ಮತ್ತು ಸದಸ್ಯರ ಭತ್ಯೆಗಳಿಗೆ ಮತ್ತು ಸೇವಾ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ, ಮತ್ತು ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949ರ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವು ಪ್ರಾಧಿಕಾರಕ್ಕೆ ಅನ್ವಯವಾಗುವಂತೆಯೇ ಈ ಪ್ರಾಧಿಕಾರಕ್ಕೂ ಅನ್ವಯವಾಗತಕ್ಕದ್ದು.

**35. ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿ.–** (1) ಪರಿಷತ್ತು, ಪ್ರಾಧಿಕಾರದ ಪ್ರಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ಅವಶ್ಯವಿರಬಹುದಾದಂಥ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿ ಸದಸ್ಯರು ಪ್ರಾಧಿಕಾರಕ್ಕೆ ಲಭ್ಯವಾಗುವಂತೆ ಮಾಡತಕ್ಕದ್ದು.

(2) ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿ ಸದಸ್ಯರ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವಾ ಷರತ್ತುಗಳು ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**36. ಪ್ರಾಧಿಕಾರಕ್ಕೆ ಅಪೀಲು.–** (1) 30ನೇ ಪ್ರಕರಣದಲ್ಲಿ ಉಲ್ಲೇಖಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಸಂಸ್ಥೆಯ ಯಾರೇ ಸದಸ್ಯನಿಗೆ ವಿಧಿಸಿದ ಪರಿಷತ್ತಿನ ಯಾವುದೇ ಆದೇಶದಿಂದ ಬಾಧಿತನಾದ ಸಂಸ್ಥೆಯ ಯಾರೇ ಸದಸ್ಯನು, ಆದೇಶವು ತನಗೆ ತಲುಪಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಸಕಾಲದಲ್ಲಿ ಅಪೀಲನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣವಿತ್ತೆಂದು ಪ್ರಾಧಿಕಾರಕ್ಕೆ ಮನದಟ್ಟಾದರೆ, ಸದರಿ ತೊಂಬತ್ತು ದಿವಸಗಳ ಅವಧಿಯ ಮುಕ್ತಾಯದ ನಂತರವೂ ಯಾವುದೇ ಅಂಥ ಅಪೀಲನ್ನು ಪುರಸ್ಕರಿಸಬಹುದು.

(2) ಪ್ರಾಧಿಕಾರವು, ಯಾವುದೇ ಪ್ರಕರಣದ ದಾಖಲೆಗಳನ್ನು ಹಾಜರುಪಡಿಸುವಂತೆ ಕೇಳಿದ ನಂತರ 30ನೇ ಪ್ರಕರಣದ ಮೇರೆಗೆ ಪರಿಷತ್ತು ಹೊರಡಿಸಿದ ಯಾವುದೇ ಆದೇಶವನ್ನು ಪರಿಷ್ಕರಿಸಬಹುದು, ಮತ್ತು ಅದು,–

(ಎ) ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟುಮಾಡಬಹುದು ಅಥವಾ ತಳ್ಳಿ ಹಾಕಬಹುದು;

(ಬಿ) ಯಾವುದೇ ದಂಡನೆಯನ್ನು ವಿಧಿಸಬಹುದು ಅಥವಾ ಆದೇಶದ ಮೂಲಕ ವಿಧಿಸಿದ ದಂಡನೆಯನ್ನು ತಳ್ಳಿಹಾಕಬಹುದು, ಕಡಿಮೆ ಮಾಡಬಹುದು ಅಥವಾ ಹೆಚ್ಚಿಸಬಹುದು;

(ಸಿ) ಪ್ರಾಧಿಕಾರವು, ಪ್ರಕರಣದ ಸಂದರ್ಭಗಳಲ್ಲಿ ಸೂಕ್ತವೆಂದು ಪರಿಗಣಿಸಿದಂಥ ಹೆಚ್ಚಿನ ವಿಚಾರಣೆಗಾಗಿ ಆ ಪ್ರಕರಣವನ್ನು ಶಿಸ್ತು ಸಮಿತಿಗೆ ಹಿಂದಕ್ಕೆ ಕಳುಹಿಸಬಹುದು; ಅಥವಾ

(ಡಿ) ಪ್ರಾಧಿಕಾರವು ಸೂಕ್ತವೆಂದು ಭಾವಿಸುವಂಥ ಇತರ ಆದೇಶವನ್ನು ಹೊರಡಿಸಬಹುದು:

ಪರಂತು, ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಮುಂಚೆ, ಪ್ರಾಧಿಕಾರವು ಸಂಬಂಧಪಟ್ಟ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು.

## ಅಧ್ಯಾಯ –VI
## ದಂಡನೆಗಳು

**37. ಸದಸ್ಯನೆಂದು ಸುಳ್ಳು ಕ್ಲೇಮು ಮಾಡುವುದು, ಇತ್ಯಾದಿಗೆ ದಂಡನೆ.–** 10ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು,–

(ಎ) ಸಂಸ್ಥೆಯ ಸದಸ್ಯನಾಗಿಲ್ಲದ,–

(i) ಸದರಿ ಪ್ರಕರಣದಲ್ಲಿ ನಮೂದಿಸಿದ ರೀತಿಗಳ ಪೈಕಿ ಯಾವುದೇ ರೀತಿಯಲ್ಲಿ ತಾನು ಸಂಸ್ಥೆಯ ಸದಸ್ಯನಿರುವೆನೆಂದು ನಿರೂಪಿಸುವ; ಅಥವಾ

(ii) "ವಿಮಾ ತಜ್ಞ" ಪದನಾಮವನ್ನು ಬಳಸುವ; ಅಥವಾ

(iii) ತನ್ನ ಹೆಸರಿನ ನಂತರ "ಎಐಎಐ" ಅಥವಾ "ಎಫ್‌ಐಎಐ" ಅಕ್ಷರಗಳನ್ನು ಬಳಸುವ; ಅಥವಾ

(iv) ವಿಮಾ ತಜ್ಞ ವೃತ್ತಿಯನ್ನು ನಡೆಸುತ್ತಿರುವ; ಅಥವಾ

(ಬಿ) ಸಂಸ್ಥೆಯ ಸದಸ್ಯನಾಗಿದ್ದು, ಆದರೆ, ವೃತ್ತಿ ನಡೆಸಲು ಪ್ರಮಾಣಪತ್ರವನ್ನು ಹೊಂದಿಲ್ಲದೆ ವಿಮಾ ತಜ್ಞನಾಗಿ ವೃತ್ತಿಯಲ್ಲಿರುವುದಾಗಿ ಅಥವಾ ವೃತ್ತಿ ನಡೆಸುತ್ತಿರುವುದಾಗಿ ನಿರೂಪಿಸುವ

– ಯಾರೇ ವ್ಯಕ್ತಿಯು, ಮೊದಲ ಅಪರಾಧ ನಿರ್ಣಯವಾದ ಮೇಲೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಯಾವುದೇ ತರುವಾಯದ

ಅಪರಾಧ ನಿರ್ಣಯವಾದ ಮೇಲೆ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**38. ಸಂಸ್ಥೆಯ ಹೆಸರನ್ನು ಬಳಸುವುದು, ವಿಮಾ ತಜ್ಞತೆ ವಿಜ್ಞಾನದ ಪದವಿಯನ್ನು ನೀಡುವುದು, ಇತ್ಯಾದಿಗಳಿಗೆ ದಂಡನೆ.–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾರೇ ವ್ಯಕ್ತಿಯು,–

(ಎ) ಸಾರ್ವಜನಿಕರನ್ನು ಮೋಸಗೊಳಿಸುವ ಹಾಗೆ ಅಥವಾ ಮೋಸಗೊಳಿಸುವ ಸಂಭವವಿರುವಂತೆ ಸಂಸ್ಥೆಯ ಹೆಸರಿನಂತೆಯೇ ಅಥವಾ ಸಾಮಾನ್ಯ ಮೊಹರಿನಂತೆಯೇ ತದ್ವತ್ತಾಗಿ ಇರುವ ಅಥವಾ ಅದನ್ನು ನಿಕಟವಾಗಿ ಹೋಲುವ ಹೆಸರನ್ನು ಅಥವಾ ಸಾಮಾನ್ಯ ಮೊಹರನ್ನು ಬಳಸಿಕೊಳ್ಳತಕ್ಕದ್ದಲ್ಲ; ಅಥವಾ

(ಬಿ) ಸಂಸ್ಥೆಯ ಸದಸ್ಯನಿಗೆ ಸಾದೃಶ್ಯವಾದ ವಿಮಾ ತಜ್ಞತೆಯಲ್ಲಿನ ಸ್ಥಾನಮಾನವನ್ನು ಅಥವಾ ಯಾವುದೇ ಅರ್ಹತೆ ಗಳಿಸಿರುವುದನ್ನು ಅಥವಾ ಸಕ್ಷಮತೆಯನ್ನು ಸೂಚಿಸುವ ಅಥವಾ ಸೂಚಿಸುವುದೆಂದು ತಾತ್ಪರ್ಯವಾಗುವ ಯಾವುದೇ ಪದವಿಯನ್ನು, ಡಿಪ್ಲೊಮಾವನ್ನು ಅಥವಾ ಪ್ರಮಾಣಪತ್ರವನ್ನು ನೀಡತಕ್ಕದ್ದಲ್ಲ ಅಥವಾ ಯಾವುದೇ ಪದನಾಮವನ್ನು ಕೊಡತಕ್ಕದ್ದಲ್ಲ; ಅಥವಾ

(ಸಿ) ವಿಮಾ ತಜ್ಞರ ವೃತ್ತಿಯನ್ನು ಯಾವ ರೀತಿಯಲ್ಲಾದರೂ ವಿನಿಯಮಿಸಲು ಕೋರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅವನ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಇತರ ವ್ಯವಹರಣೆಗಳಿಗೆ ಬಾಧಕವಾಗದಂತೆ, ಮೊದಲ ಅಪರಾಧ ನಿರ್ಣಯವಾದ ಮೇಲೆ ಐವತ್ತು ಸಾವಿರ ರೂಪಾಯಿಗಳವರಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ, ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯಕ್ಕೆ ಅಥವಾ ಇತರ ಸಂಸ್ಥೆಗೆ ಅಥವಾ ಆ ಸಂಸ್ಥೆಗೆ ಸಂಯೋಜಿತವಾದ ಯಾವುದೇ ನಿಕಾಯಕ್ಕೆ ಅನ್ವಯವಾಗತಕ್ಕದ್ದಲ್ಲ.

**39. ಕಂಪನಿಗಳು ವಿಮಾ ತಜ್ಞತೆ ವೃತ್ತಿಯಲ್ಲಿ ತೊಡಗಬಾರದು.–** (1) ಭಾರತದಲ್ಲಿ ನಿಗಮಿತವಾಗಿರುವ ಅಥವಾ ಬೇರೆಲ್ಲಿಯಾದರೂ ನಿಗಮಿತವಾಗಿರುವ ಯಾವುದೇ ಕಂಪನಿಯು, ವಿಮಾ ತಜ್ಞತೆ ವೃತ್ತಿಯನ್ನು ನಡೆಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಕಂಪನಿಯು, ಮೊದಲ ಅಪರಾಧ ನಿರ್ಣಯವಾದ ಮೇಲೆ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು.

**40. ಅನರ್ಹ ವ್ಯಕ್ತಿಯು ದಸ್ತಾವೇಜುಗಳಿಗೆ ಸಹಿ ಹಾಕಬಾರದು.–** (1) ಸಂಸ್ಥೆಯ ಅಧಿಸದಸ್ಯನಲ್ಲದ ಯಾರೇ ವ್ಯಕ್ತಿಯು ವೃತ್ತಿ ನಡೆಸುತ್ತಿರುವ ವಿಮಾ ತಜ್ಞನ ಪರವಾಗಿ ಅಥವಾ ಅಂಥ ವಿಮಾ ತಜ್ಞರಿರುವ ಫರ್ಮಿನ ಪರವಾಗಿ, ಅವನ ಅಥವಾ ಅದರ ವೃತ್ತೀಯ ಸಾಮರ್ಥ್ಯದಿಂದ ಯಾವುದೇ ದಸ್ತಾವೇಜಿಗೆ ಸಹಿ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅವನ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಇತರ ವ್ಯವಹರಣೆಗಳಿಗೆ ಬಾಧಕವಾಗದಂತೆ, ಮೊದಲ ಅಪರಾಧ ನಿರ್ಣಯವಾದ ಮೇಲೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**41. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಿದ ವ್ಯಕ್ತಿಯು ಕಂಪನಿಯಾಗಿದ್ದರೆ, ಆ ಕಂಪನಿಯನ್ನು ಹಾಗೂ ಅಪರಾಧವು ನಡೆದ ಕಾಲದಲ್ಲಿ ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಯ ಪ್ರಭಾರದಲ್ಲಿದ್ದ ಅಥವಾ ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು, ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯು, ಆ ಅಪರಾಧವು ತನ್ನ ಅರಿವಿಗೆ ಬಾರದಂತೆ ನಡೆದಿದೆಯೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಕಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು, ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಅವರ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ರುಜುವಾತಾದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷ್ಯತೆಯಿಂದ ನಡೆದಿದೆಯೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಆ ಫರ್ಮಿನ ಒಬ್ಬ ಪಾಲುದಾರ.

**42. ಪ್ರಾಸಿಕ್ಯೂಷನ್ನಿಗೆ ಅನುಮೋದನೆ.–** ಪರಿಷತ್ತು ಸಲ್ಲಿಸಿದ ದೂರಿನ ಮೇಲೆ ಹೊರತು ಅಥವಾ ಪರಿಷತ್ತಿನ ಅಥವಾ ಕೇಂದ್ರ ಸರ್ಕಾರದ ಆದೇಶದ ಮೇಲೆ ಸಲ್ಲಿಸಿದ ದೂರಿನ ಮೇಲೆ ಹೊರತು ಈ ಅಧಿನಿಯಮದ ಮೇರೆಗೆ ಯಾರೇ ವ್ಯಕ್ತಿಯನ್ನು ಪ್ರಾಸಿಕ್ಯೂಟ್ ಮಾಡತಕ್ಕದ್ದಲ್ಲ.

## ಅಧ್ಯಾಯ –VII
## ಗುಣಮಟ್ಟ ಪರಿಶೀಲನಾ ಮಂಡಳಿ

**43. ಗುಣಮಟ್ಟ ಪರಿಶೀಲನಾ ಮಂಡಳಿಯ ಸ್ಥಾಪನೆ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಒಬ್ಬ ಪೀಠಾಧ್ಯಕ್ಷನನ್ನು ಮತ್ತು ನಾಲ್ಕಕ್ಕಿಂತ ಹೆಚ್ಚಲ್ಲದ ಸದಸ್ಯರನ್ನು ಒಳಗೊಂಡಿರುವ ಒಂದು ಗುಣಮಟ್ಟ ಪರಿಶೀಲನಾ ಮಂಡಳಿಯನ್ನು ರಚಿಸತಕ್ಕದ್ದು:

ಪರಂತು, ಮಂಡಳಿಯು ಇಬ್ಬರು ಸದಸ್ಯರಿಂದ ರಚಿತವಾದ ಸಂದರ್ಭದಲ್ಲಿ ಅನುಕ್ರಮವಾಗಿ ಪರಿಷತ್ತಿನಿಂದ ಒಬ್ಬ ಮತ್ತು ಕೇಂದ್ರ ಸರ್ಕಾರದಿಂದ ಒಬ್ಬ ಸದಸ್ಯ ನಾಮ ನಿರ್ದೇಶಿತರಾಗಿರತಕ್ಕದ್ದು.

(2) ಮಂಡಳಿಯ ಪೀಠಾಧ್ಯಕ್ಷನನ್ನು ಮತ್ತು ಸದಸ್ಯರನ್ನು, ಕಾನೂನು, ಶಿಕ್ಷಣ, ಅರ್ಥಶಾಸ್ತ್ರ, ವ್ಯವಹಾರ, ಹಣಕಾಸು, ಲೆಕ್ಕಶಾಸ್ತ್ರ ಅಥವಾ ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಶ್ರೇಷ್ಠ ವ್ಯಕ್ತಿಗಳೊಳಗಿಂದ ನೇಮಕ ಮಾಡತಕ್ಕದ್ದು.

(3) ಮಂಡಳಿಯ ಇಬ್ಬರು ಸದಸ್ಯರನ್ನು ಪರಿಷತ್ತು ನಾಮನಿರ್ದೇಶಿಸತಕ್ಕದ್ದು ಮತ್ತು ಇತರ ಇಬ್ಬರು ಸದಸ್ಯರನ್ನು ಕೇಂದ್ರ ಸರ್ಕಾರವು ನಾಮ ನಿರ್ದೇಶಿಸತಕ್ಕದ್ದು.

**44. ಮಂಡಳಿಯ ಪ್ರಕಾರ್ಯಗಳು.–** ಮಂಡಳಿಯು ಈ ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಸಂಸ್ಥೆಯ ಸದಸ್ಯರು ಒದಗಿಸುವ ಸೇವೆಗಳಿಗಾಗಿ ಮಾನದಂಡಗಳನ್ನು ನಿಗದಿಪಡಿಸುವುದು;

(ಬಿ) ವಿಮಾ ತಜ್ಞರ ಲೆಕ್ಕಪರಿಶೋಧನಾ ಸೇವೆಗಳೂ ಸೇರಿದಂತೆ ಸಂಸ್ಥೆಯ ಸದಸ್ಯರು ಒದಗಿಸಿದ ಸೇವೆಗಳ ಗುಣಮಟ್ಟವನ್ನು ಪುನರವಲೋಕಿಸುವುದು; ಮತ್ತು

(ಸಿ) ಸೇವೆಗಳ ಗುಣಮಟ್ಟವನ್ನು ಸುಧಾರಿಸಲು ಮತ್ತು ವಿವಿಧ ಶಾಸನಬದ್ಧ ಮತ್ತು ಇತರ ವಿನಿಯಾಮಕ ಅಗತ್ಯತೆಗಳಿಗೆ ಬದ್ಧರಾಗಿರಲು ಸಂಸ್ಥೆಯ ಸದಸ್ಯರಿಗೆ ಮಾರ್ಗದರ್ಶನ ನೀಡುವುದು.

**45. ಮಂಡಲಿಯ ಪ್ರಕ್ರಿಯೆ.–** ಮಂಡಲಿಯು ತನ್ನ ಸಭೆಯಲ್ಲಿ ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

**46. ಮಂಡಳಿಯ ಪೀಠಾಧ್ಯಕ್ಷನ ಮತ್ತು ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.–** ಮಂಡಳಿಯ ಪೀಠಾಧ್ಯಕ್ಷನ ಮತ್ತು ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ಅವರ ಸಭೆಗಳ ಸ್ಥಳ, ಅವರ ಸಂಭಾವನೆ ಮತ್ತು ಭತ್ಯೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**47. ಮಂಡಳಿಯ ವೆಚ್ಚ.–** ಮಂಡಳಿಯ ವೆಚ್ಚವನ್ನು ಪರಿಷತ್ತು ಭರಿಸತಕ್ಕದ್ದು.

## ಅಧ್ಯಾಯ –VIII
## ಸೊಸೈಟಿಗಳ ನೋಂದಣಿ ಅಧಿನಿಯಮದ ಮೇರೆಗೆ ನೋಂದಾಯಿತವಾದ ಭಾರತದ ವಿಮಾ ತಜ್ಞರ ಸೊಸೈಟಿಯ ವಿಸರ್ಜನೆ

**48. ಭಾರತದ ವಿಮಾ ತಜ್ಞರ ಸೊಸೈಟಿಯ ವಿಸರ್ಜನೆ.–** ಗೊತ್ತುಪಡಿಸಿದ ದಿನದಂದು,–

(ಎ) ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮತ್ತು ಮುಂಬಯಿ ಸಾರ್ವಜನಿಕ ನ್ಯಾಸಗಳ ಅಧಿನಿಯಮ, 1950 (ಮುಂಬಯಿ ಅಧಿನಿಯಮ 1950ರ

XXXIX) ರ ಮೇರೆಗೆ ನೋಂದಣಿಯಾದ ಭಾರತದ ವಿಮಾ ತಜ್ಞರ ಸೊಸೈಟಿ ಎಂಬ ಹೆಸರಿನ ಸೊಸೈಟಿಯು ವಿಸರ್ಜಿತವಾಗತಕ್ಕದ್ದು ಮತ್ತು ತದನಂತರ ಯಾರೇ ವ್ಯಕ್ತಿಯು, ವಿಸರ್ಜಿತ ಸೊಸೈಟಿಯ ವಿರುದ್ಧ ಅಥವಾ ಅದರ ಯಾರೇ ಅಧಿಕಾರಿಯ ವಿರುದ್ಧ, ಅಂಥ ಅಧಿಕಾರಿಯಾಗಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಅಗತ್ಯವಿರಬಹುದಾದಷ್ಟರ ಮಟ್ಟಿಗೆ ಹೊರತು, ಯಾವುವೇ ಕ್ಲೇಮುಗಳನ್ನು ಮಾಡತಕ್ಕದ್ದಲ್ಲ ಅಥವಾ ಬೇಡಿಕೆಗಳಿಗೆ ಒತ್ತಾಯಿಸತಕ್ಕದ್ದಲ್ಲ ಅಥವಾ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ;

(ಬಿ) ಸದರಿ ವಿಸರ್ಜಿತ ಸೊಸೈಟಿಗೆ ಅಥವಾ ಅದಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ಸದಸ್ಯನಿಗೆ ಇರುವ ಹಕ್ಕು ಅಂತ್ಯಗೊಳ್ಳತಕ್ಕದ್ದು ಮತ್ತು ತದನಂತರ ಸೊಸೈಟಿಯ ಯಾರೇ ಸದಸ್ಯನು, ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಹೊರತು, ಆ ಸೊಸೈಟಿಗೆ ಸಂಬಂಧಿಸಿದಂತೆ ಯಾವುವೇ ಕ್ಲೇಮುಗಳನ್ನು ಮಾಡತಕ್ಕದ್ದಲ್ಲ, ಬೇಡಿಕೆಗಳಿಗೆ ಒತ್ತಾಯಿಸತಕ್ಕದ್ದಲ್ಲ ಅಥವಾ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

**49. ವಿಸರ್ಜಿತ ಸೊಸೈಟಿಯ ನೌಕರರಿಗೆ ಸಂಬಂಧಿಸಿದ ಉಪಬಂಧಗಳು.–** (1) ವಿಸರ್ಜಿತ ಸೊಸೈಟಿಯಲ್ಲಿ ನಿಯೋಜಿತನಾಗಿದ್ದ ಮತ್ತು ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಅದರ ನಿಯೋಜನೆಯಲ್ಲಿ ಮುಂದುವರಿಯುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಪ್ರಾರಂಭದಿಂದ ಸಂಸ್ಥೆಯ ನೌಕರನಾಗತಕ್ಕದ್ದು, ಈ ಅಧಿನಿಯಮವನ್ನು ಅಂಗೀಕರಿಸದೇ ಇದ್ದಿದ್ದರೆ ಅವನು ಯಾವ ಅವಧಿಯವರೆಗೆ ಮತ್ತು ಯಾವ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಹಾಗೂ ನಿವೃತ್ತಿ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಹೊಂದಬಹುದಾಗಿದ್ದ ಹಕ್ಕುಗಳು, ವಿಶೇಷಾಧಿಕಾರಗಳೊಂದಿಗೆ ಸಂಸ್ಥೆಯಲ್ಲಿ ಪದವನ್ನು ಅಥವಾ ಸೇವೆಯನ್ನು ಧಾರಣ ಮಾಡತಕ್ಕದ್ದು ಮತ್ತು ಸಂಸ್ಥೆಯಲ್ಲಿ ಅವನ ನಿಯೋಜನೆಯು ಕೊನೆಗೊಳ್ಳುವ ಹೊರತು ಅಥವಾ ಕೊನೆಗೊಳ್ಳುವವರೆಗೆ ಅಥವಾ ಅವನ ಸಂಭಾವನೆಯನ್ನು, ನಿಯೋಜನೆಯ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಸಂಸ್ಥೆಯು ಯುಕ್ತವಾಗಿ ಬದಲಾಯಿಸುವವರೆಗೆ ಮುಂದುವರೆಯತಕ್ಕದ್ದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ವಿಸರ್ಜಿತ ಸಂಘದ ಯಾರೇ ನೌಕರನ ಸೇವೆಗಳನ್ನು ಸಂಸ್ಥೆಗೆ ವರ್ಗಾವಣೆ ಮಾಡುವುದು ಈ ಅಧಿನಿಯಮದ ಅಥವಾ ಇತರ ಕಾನೂನಿನ ಮೇರೆಗೆ ಯಾರೇ ಅಂಥ ನೌಕರನಿಗೆ ಯಾವುದೇ ನಷ್ಟ ಪರಿಹಾರ ನೀಡಲು ಹಕ್ಕುಳ್ಳವನನ್ನಾಗಿಸತಕ್ಕದ್ದಲ್ಲ ಮತ್ತು ಅಂಥ ಕ್ಲೇಮುಗಳನ್ನು ಯಾವುದೇ ನ್ಯಾಯಾಲಯವು, ನ್ಯಾಯಾಧಿಕರಣವು ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

## ಅಧ್ಯಾಯ – IX
## ಸಂಕೀರ್ಣ

**50. ವಿಮಾ ತಜ್ಞನು ಒಂದಕ್ಕಿಂತ ಹೆಚ್ಚು ಕಚೇರಿಗಳನ್ನು ನಿರ್ವಹಿಸುವುದು.–** (1) ವೃತ್ತಿ ನಡೆಸುತ್ತಿರುವ ವಿಮಾ ತಜ್ಞನು ಅಥವಾ ಅಂಥ ವಿಮಾ ತಜ್ಞರ ಫರ್ಮು ಭಾರತದಲ್ಲಿ ಅಥವಾ ಭಾರತದ ಹೊರಗೆ ಒಂದಕ್ಕಿಂತ ಹೆಚ್ಚು ಕಚೇರಿಗಳನ್ನು ಹೊಂದಿರುವಲ್ಲಿ, ಅಂಥ ಪ್ರತಿಯೊಂದು ಕಚೇರಿಯು ಸಂಸ್ಥೆಯ ಅಧಿಸದಸ್ಯನ ಪ್ರತ್ಯೇಕ ಪ್ರಭಾರದಲ್ಲಿರತಕ್ಕದ್ದು:

ಪರಂತು, ಸೂಕ್ತ ಸಂದರ್ಭಗಳಲ್ಲಿ, ವೃತ್ತಿ ನಡೆಸುತ್ತಿರುವ ಯಾರೇ ವಿಮಾ ತಜ್ಞನನ್ನು ಅಥವಾ ಅಂಥ ವಿಮಾ ತಜ್ಞರ ಫರ್ಮನ್ನು ಈ ಉಪಪ್ರಕರಣದ ವ್ಯಾಪ್ತಿಯಿಂದ ಪರಿಷತ್ತು ವಿನಾಯಿತಿಗೊಳಿಸಬಹುದು.

(2) ಒಂದಕ್ಕಿಂತ ಹೆಚ್ಚು ಕಚೇರಿಗಳನ್ನು ನಿರ್ವಹಿಸುತ್ತಿರುವ ವೃತ್ತಿ ನಡೆಸುತ್ತಿರುವ ಪ್ರತಿಯೊಬ್ಬ ವಿಮಾ ತಜ್ಞನು ಅಥವಾ ಅಂಥ ವಿಮಾ ತಜ್ಞರ ಫರ್ಮು, ಆ ಕಚೇರಿಗಳ ಮತ್ತು ಅದರ ಪ್ರಭಾರದಲ್ಲಿರುವ ವ್ಯಕ್ತಿಗಳ ಒಂದು ಪಟ್ಟಿಯನ್ನು ಪರಿಷತ್ತಿಗೆ ಕಳುಹಿಸತಕ್ಕದ್ದು ಮತ್ತು ಅದಕ್ಕೆ ಸಂಬಂಧಿಸಿದ ಯಾವುವೇ ಬದಲಾವಣೆಗಳನ್ನು ಪರಿಷತ್ತಿಗೆ ತಿಳಿಸತಕ್ಕದ್ದು.

**51. ಪರಸ್ಪರತೆ.–** (1) ಕೇಂದ್ರ ಸರ್ಕಾರವು, ಈ ಬಗ್ಗೆ, ರಾಜಪತ್ರದಲ್ಲಿ ಅಧಿಸೂಚಿಸಿದ ಯಾವುದೇ ದೇಶವು, ಭಾರತೀಯ ಅಧಿವಾಸಿಗಳಾದ ವ್ಯಕ್ತಿಗಳನ್ನು ಸದರಿ ಸಂಸ್ಥೆಗೆ ಸದೃಶ್ಯವಾಗಿರುವ ಯಾವುದೇ ಸಂಸ್ಥೆಯ ಸದಸ್ಯರಾಗುವುದನ್ನು ಅಥವಾ ವಿಮಾ ತಜ್ಞರ ವೃತ್ತಿ ನಡೆಸುವುದನ್ನು ಪ್ರತಿಬಂಧಿಸಿದಲ್ಲಿ ಅಥವಾ ಅವರನ್ನು ಆ ದೇಶದಲ್ಲಿ ಅನುಚಿತ ತಾರತಮ್ಯಕ್ಕೆ ಒಳಪಡಿಸಿದಲ್ಲಿ, ಯಾವುದೇ ಅಂಥ ದೇಶದ ಪ್ರಜೆಯು ಭಾರತದಲ್ಲಿ ಸಂಸ್ಥೆಯ ಸದಸ್ಯನಾಗಲು ಅಥವಾ ವಿಮಾ ತಜ್ಞರ ವೃತ್ತಿಯನ್ನು ನಡೆಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಪರಿಷತ್ತು, ಯಾವ ಷರತ್ತುಗಳಿಗೊಳಪಟ್ಟು ವಿಮಾ ತಜ್ಞತೆ ವಿಜ್ಞಾನಕ್ಕೆ ಸಂಬಂಧಪಟ್ಟ ವಿದೇಶಿ ವಿದ್ಯಾರ್ಹತೆಗಳಿಗೆ ರಿಜಿಸ್ಟರಿನಲ್ಲಿ ನಮೂದಿಸುವ ಉದ್ದೇಶಗಳಿಗಾಗಿ ಮನ್ನಣೆ ನೀಡತಕ್ಕದ್ದೋ ಆ ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳನ್ನು ನಿರ್ದಿಷ್ಟಪಡಿಸಬಹುದು.

**52. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಅಧಿನಿಯಮದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳನ್ನು ಪರಿಷತ್ತಿಗೆ ನೀಡಬಹುದು ಮತ್ತು ಪರಿಷತ್ತು, ಈ

ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(2) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಪರಿಷತ್ತು, (1)ನೇ ಉಪಪ್ರಕರಣದ ಮೇರೆಗೆ ನೀಡಿದ ನಿರ್ದೇಶನಗಳನ್ನು ಜಾರಿಗೆ ತರುವಲ್ಲಿ ಸತತವಾಗಿ ವಿಫಲವಾದರೆ, ಅದು, ಪರಿಷತ್ತಿಗೆ ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ನೀಡಿದ ತರುವಾಯ, ಅಧಿಸೂಚನೆಯ ಮೂಲಕ, ಪರಿಷತ್ತನ್ನು ವಿಸರ್ಜಿಸಬಹುದು. ಆ ತರುವಾಯ, ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಒಂದು ಹೊಸ ಪರಿಷತ್ತನ್ನು ರಚಿಸತಕ್ಕದ್ದು.

(3) ಕೇಂದ್ರ ಸರ್ಕಾರವು (2)ನೇ ಉಪಪ್ರಕರಣದ ಮೇರೆಗೆ ಪರಿಷತ್ತನ್ನು ವಿಸರ್ಜಿಸುವ ಅಧಿಸೂಚನೆಯನ್ನು ಹೊರಡಿಸಿರುವಲ್ಲಿ, ಅದು, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಒಂದು ಹೊಸ ಪರಿಷತ್ತನ್ನು ರಚಿಸುವವರೆಗೆ, ಪರಿಷತ್ತಿನ ವ್ಯವಹಾರಗಳ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವುದಕ್ಕೆ ಮತ್ತು ಅಧಿಸೂಚನೆಯಲ್ಲಿ ನಮೂದಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಯಾರೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳ ನಿಕಾಯವನ್ನು ಅಧಿಕೃತಗೊಳಿಸಬಹುದು.

**53. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ಹೊರಡಿಸಿದ ಯಾವುದೇ ನಿಯಮದ, ವಿನಿಯಮನದ, ಅಧಿಸೂಚನೆಯ, ನಿರ್ದೇಶನದ ಅಥವಾ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ, ಕೇಂದ್ರ ಸರ್ಕಾರದ ಅಥವಾ ಪರಿಷತ್ತಿನ ಅಥವಾ ಶಿಸ್ತು ಸಮಿತಿಯ ಅಥವಾ ನ್ಯಾಯಾಧಿಕರಣದ ಅಥವಾ ಪ್ರಾಧಿಕಾರದ ಅಥವಾ ಮಂಡಳಿಯ ಅಥವಾ ಪ್ರಾಸಿಕ್ಯೂಷನ್ ನಿರ್ದೇಶಕನ ವಿರುದ್ಧ ಅಥವಾ ಸರ್ಕಾರದ, ಪರಿಷತ್ತಿನ, ಸಮಿತಿಯ, ನ್ಯಾಯಾಧಿಕರಣದ, ಪ್ರಾಧಿಕಾರದ ಅಥವಾ ಮಂಡಳಿಯ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**54. ಸದಸ್ಯರು, ಮುಂತಾದವರು ಲೋಕ ನೌಕರರಾಗಿರುವುದು.–** ಪ್ರಾಧಿಕಾರದ, ನ್ಯಾಯಾಧಿಕರಣದ ಮತ್ತು ಮಂಡಳಿಯ ಪೀಠಾಧ್ಯಕ್ಷನನ್ನು, ಪೀಠಾಸೀನಾಧಿಕಾರಿಯನ್ನು, ಸದಸ್ಯರನ್ನು ಮತ್ತು ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ಹಾಗೂ ಪ್ರಾಸಿಕ್ಯೂಷನ್ ನಿರ್ದೇಶಕನನ್ನು, ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

**55. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ, ಉಪಬಂಧಿಸಬಹುದು, ಎಂದರೆ:–

(ಎ) 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪರಿಷತ್ತಿನ ಸದಸ್ಯರಾಗುವುದಕ್ಕೆ ಸಂಬಂಧಿಸಿದಂತೆ ಚುನಾವಣೆ ನಡೆಸುವ ಮತ್ತು ನಾಮ ನಿರ್ದೇಶನ ಮಾಡುವ ರೀತಿ;

(ಬಿ) 16ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನ್ಯಾಯಾಧಿಕರಣದ ಪೀಠಾಸೀನಾಧಿಕಾರಿಗಳ ಮತ್ತು ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ಸಭೆಯ ಸ್ಥಳ, ಅವರಿಗೆ ಸಂದಾಯ ಮಾಡಬೇಕಾದ ಸಂಭಾವನೆ ಮತ್ತು ಭತ್ಯೆಗಳು;

(ಸಿ) 26ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಶಿಸ್ತು ಸಮಿತಿಯು ನಡೆಸುವ ವಿಚಾರಣೆಯ ಪ್ರಕ್ರಿಯೆ ಮತ್ತು ವರದಿಯನ್ನು ಸಲ್ಲಿಸುವುದು;

(ಡಿ) 27ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಾಸಿಕ್ಯೂಷನ್ ನಿರ್ದೇಶಕನು ನಡೆಸುವ ವಿಚಾರಣೆಯ ಕಾರ್ಯವಿಧಾನ;

(ಇ) ಯಾವ ಕೃತ್ಯವನ್ನು ಅಥವಾ ಲೋಪವನ್ನು 31ನೇ ಪ್ರಕರಣದ ಮೇರೆಗೆ ವೃತ್ತೀಯ ದುರ್ನಡತೆಯೆಂದು ನಿರ್ಧರಿಸಬಹುದೋ ಆ ಯಾವುದೇ ಕೃತ್ಯ ಅಥವಾ ಲೋಪ;

(ಎಫ್) 45ನೇ ಪ್ರಕರಣದ ಮೇರೆಗೆ ಮಂಡಳಿಯು ತನ್ನ ಸಭೆಗಳಲ್ಲಿ ಅನುಸರಿಸಬೇಕಾದ ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಬೇಕಾದ ಕಾರ್ಯವಿಧಾನ; ಮತ್ತು

(ಜಿ) 46ನೇ ಪ್ರಕರಣದ ಮೇರೆಗೆ ಮಂಡಳಿಯ ಅಧ್ಯಕ್ಷನ ಮತ್ತು ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.

**56. ವಿನಿಯಮನಗಳನ್ನು ರಚಿಸುವ ಅಧಿಕಾರ.–** (1) ಪರಿಷತ್ತು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ಪೂರ್ವ ಪ್ರಕಟಣೆಗೆ ಒಳಪಟ್ಟು, ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ವಿನಿಯಮನಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮನಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದು ಎಂದರೆ:–

(ಎ) 6ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ), (ಸಿ) ಮತ್ತು (ಡಿ) ಖಂಡಗಳ ಉದ್ದೇಶಗಳಿಗಾಗಿ ಪರೀಕ್ಷೆ ಮತ್ತು ತರಬೇತಿ;

(ಬಿ) 6ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ವಿಧಾನ;

(ಸಿ) 6ನೇ ಪ್ರಕರಣದ (3)ನೇ ಉಪಪ್ರಕರಣದ, 9ನೇ ಪ್ರಕರಣದ (2)ನೇ ಉಪ ಪ್ರಕರಣದ, 19ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ, 23ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಫೀಜುಗಳು;

(ಡಿ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಗೌರವ ಸದಸ್ಯನನ್ನು ಆಯ್ಕೆ ಮಾಡಬಹುದಾದ ರೀತಿ;

(ಇ) 8ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಂಯೋಜಿತ ಸದಸ್ಯನನ್ನು ಸೇರಿಸಿಕೊಳ್ಳುವುದಕ್ಕೆ ಇರುವ ನಿಬಂಧನೆಗಳು ಮತ್ತು ಷರತ್ತುಗಳು;

(ಎಫ್) 8ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ವಿದ್ಯಾರ್ಥಿ ಸದಸ್ಯನನ್ನು ಸೇರಿಸಿಕೊಳ್ಳುವುದಕ್ಕೆ ಶೈಕ್ಷಣಿಕ ವಿದ್ಯಾರ್ಹತೆಗಳು;

(ಜಿ) 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವೃತ್ತಿ ನಡೆಸುವ ಪ್ರಮಾಣ ಪತ್ರಕ್ಕಾಗಿ ಅಗತ್ಯಪಡಿಸಿದ ಅರ್ಹತೆಗಳು ಮತ್ತು (2)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬಹುದೋ ಆ ನಮೂನೆ;

(ಹೆಚ್) 19ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಮೂದಿಸಿದ ಪರಿಷತ್ತಿನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅದು ನಡೆಸುವ ಕಾರ್ಯಕಲಾಪ;

(ಐ) 20ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಜೆ) 21ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸಮಿತಿಗಳ ಪ್ರಕಾರ್ಯಗಳು ಮತ್ತು ಷರತ್ತುಗಳು;

(ಕೆ) 23ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣದ ಮೇರೆಗೆ ಸಂಸ್ಥೆಯ ಸದಸ್ಯರ ರಿಜಿಸ್ಟರನ್ನು ಮತ್ತು ಇತರ ವಿವರಗಳನ್ನು ನಿರ್ವಹಿಸಬೇಕಾದ ರೀತಿ;

(ಎಲ್) 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸಂಸ್ಥೆಯ ಸದಸ್ಯರ ವಾರ್ಷಿಕ ಪಟ್ಟಿಯನ್ನು ಪ್ರಕಟಿಸಬಹುದಾದ ರೀತಿ;

(ಎಂ) 25ನೇ ಪ್ರಕರಣದ ಮೇರೆಗೆ ರಿಜಿಸ್ಟರಿನಲ್ಲಿ ಪುನರ್ ನಮೂದು ಮಾಡುವುದಕ್ಕಾಗಿ ಇರುವ ಷರತ್ತುಗಳು ಮತ್ತು ಅಗತ್ಯತೆಗಳು ಹಾಗೂ ಫೀಜಿನ ಸಂದಾಯ;

(ಎನ್) 35ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿ ಸದಸ್ಯರ ಸಂಬಳಗಳು ಮತ್ತು ಭತ್ಯೆಗಳು ಮತ್ತು ಸೇವಾ ಷರತ್ತುಗಳು;

(ಓ) 51ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ಷರತ್ತುಗಳಿಗೊಳಪಟ್ಟು ವಿದೇಶೀ ಅರ್ಹತೆಗಳಿಗೆ ಮನ್ನಣೆ ನೀಡಬಹುದೋ ಆ ಷರತ್ತುಗಳು; ಮತ್ತು

(ಪಿ) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**57. ವಿನಿಯಮನಗಳನ್ನು ರಚಿಸುವುದಕ್ಕಾಗಿ ಅಥವಾ ತಿದ್ದುಪಡಿ ಮಾಡುವುದಕ್ಕಾಗಿ ನಿರ್ದೇಶನಗಳನ್ನು ಹೊರಡಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಯಾವುವೇ ವಿನಿಯಮನಗಳನ್ನು ರಚಿಸುವುದು ಅಥವಾ ಈಗಾಗಲೇ ರಚಿಸಲಾಗಿರುವ ಯಾವುವೇ ವಿನಿಯಮನಗಳನ್ನು ಈ ಬಗ್ಗೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ತಿದ್ದುಪಡಿ ಮಾಡುವುದು ಅಥವಾ ರದ್ದುಪಡಿಸುವುದು ವಿಹಿತವೆಂದು ಕೇಂದ್ರ ಸರ್ಕಾರವು ಪರ್ಯಾಲೋಚಿಸಿದಲ್ಲಿ, ಅದು ಲಿಖಿತ ಆದೇಶದ ಮೂಲಕ, ಹಾಗೆ ಮಾಡುವಂತೆ ಪರಿಷತ್ತಿಗೆ ನಿರ್ದೇಶಿಸಬಹುದು.

(2) ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಪರಿಷತ್ತು, ಅಂಥ ಆದೇಶವನ್ನು ಪಾಲಿಸಲು ವಿಫಲವಾದರೆ ಅಥವಾ ನಿರ್ಲಕ್ಷಿಸಿದರೆ, ಕೇಂದ್ರ ಸರ್ಕಾರವು ತಾನೇ ವಿನಿಯಮನಗಳನ್ನು ರಚಿಸಬಹುದು ಅಥವಾ ಪರಿಷತ್ತು ರಚಿಸಿದ ವಿನಿಯಮನಗಳನ್ನು ತಿದ್ದುಪಡಿ ಮಾಡಬಹುದು ಅಥವಾ ರದ್ದುಪಡಿಸಬಹುದು.

**58. ನಿಯಮಗಳನ್ನು ಮತ್ತು ವಿನಿಯಮನಗಳನ್ನು ಸಂಸತ್ತಿನ ಮುಂದೆ ಇರಿಸುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಅನುಕ್ರಮವಾಗಿ ಬರುವ

ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮನವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**59. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸುವುದಕ್ಕೆ ಅಗತ್ಯವಿರಬಹುದಾದಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಪ್ರಕರಣದ ಮೇರೆಗಿನ ಅಂಥ ಆದೇಶವನ್ನು ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು.

## ಅನುಸೂಚಿ
## (31ನೇ ಪ್ರಕರಣವನ್ನು ನೋಡಿ)

## ಭಾಗ –I

### ವೃತ್ತಿ ನಡೆಸುತ್ತಿರುವ ಸಂಸ್ಥೆಯ ಸದಸ್ಯರಿಗೆ ಸಂಬಂಧಿಸಿದ ವೃತ್ತೀಯ ದುರ್ನಡತೆ

ವೃತ್ತಿ ನಡೆಸುತ್ತಿರುವ ವಿಮಾ ತಜ್ಞನು,–

(1) ವಿಮಾ ತಜ್ಞನಾಗಿ ತನ್ನ ಹೆಸರಿನಲ್ಲಿ ವೃತ್ತಿ ನಡೆಸಲು ಯಾರೇ ವ್ಯಕ್ತಿಗೆ, ಅಂಥ ವ್ಯಕ್ತಿಯೂ ಕೂಡ ವೃತ್ತಿ ನಡೆಸುತ್ತಿರುವ ವಿಮಾ ತಜ್ಞನಾಗಿದ್ದ ಮತ್ತು ತನ್ನೊಂದಿಗೆ ಪಾಲುದಾರನಾಗಿದ್ದ ಅಥವಾ ಸ್ವತಃ ನಿಯೋಜಿತನಾಗಿದ್ದ ಹೊರತು, ಅನುಮತಿಸಿದರೆ, ಅವನಿಗೆ; ಅಥವಾ

(2) ಸಂಸ್ಥೆಯ ಸದಸ್ಯನಲ್ಲದ ಅಥವಾ ಪಾಲುದಾರನಲ್ಲದ ಅಥವಾ ನಿವೃತ್ತ ಪಾಲುದಾರನಲ್ಲದ ಅಥವಾ ಮೃತ ಪಾಲುದಾರನ ಕಾನೂನು ಸಮ್ಮತ ಪ್ರತಿನಿಧಿಯಲ್ಲದ ಯಾರೇ ವ್ಯಕ್ತಿಗೆ, ನೌಕರನಿಗೆ ಸಂಭಾವನೆಯ ರೂಪದಲ್ಲಿ ಸಂದಾಯ ಮಾಡಿದ್ದರೆ, ಯಾವುದೇ ಷೇರು, ಕಮಿಷನ್ ಅಥವಾ ದಲ್ಲಾಳಿ ಫೀಜನ್ನು ಅವನ ವೃತ್ತಿ ಸಂಬಂಧೀ ವ್ಯವಹಾರದ ಲಾಭಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂದಾಯ ಮಾಡಿದರೆ ಅಥವಾ ಸಂದಾಯ ಮಾಡುವುದಕ್ಕೆ ಅನುಮತಿಸಿದರೆ ಅಥವಾ ಸಂದಾಯ ಮಾಡುವುದಕ್ಕೆ ಅಥವಾ ಅನುಮತಿಸುವುದಕ್ಕೆ ಒಪ್ಪಿಕೊಂಡರೆ; ಅಥವಾ

(3) ವೃತ್ತಿನಡೆಸುತ್ತಿರುವ ವಿಮಾ ತಜ್ಞನನ್ನು ಹೊರತುಪಡಿಸಿ ಯಾರೇ ವ್ಯಕ್ತಿಯೊಂದಿಗೆ ಅಥವಾ ವಿದೇಶದಲ್ಲಿ ಅವನ ವಾಸ ಸ್ಥಳ ಇರದಿದ್ದರೆ ಅವನು 6ನೇ ಪ್ರಕರಣದ (1)ನೇ ಉಪ ಪ್ರಕರಣದ (ಸಿ) ಖಂಡದ ಮೇರೆಗೆ ಸದಸ್ಯನೆಂದು ಸೇರಿಸಿಕೊಳ್ಳಲು ಹಕ್ಕುಳ್ಳವನಾಗಿರಬಹುದಾಗಿದ್ದ ಭಾರತದ ಹೊರಗೆ ವಾಸಿಸುವ ವ್ಯಕ್ತಿಯೊಂದಿಗೆ ಅಥವಾ ಅಂಥ ಪಾಲುದಾರಿಕೆಗೆ ಅನುಮತಿ ನೀಡುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ಅಥವಾ ಪರಿಷತ್ತು ಯಾರ ಅರ್ಹತೆಗಳಿಗೆ ಮನ್ನಣೆ ನೀಡಿದೆಯೋ ಆ ಯಾರೇ ವ್ಯಕ್ತಿಯೊಂದಿಗೆ ಪಾಲುದಾರಿಕೆ ಮಾಡಿಕೊಂಡರೆ, ಪರಂತು ಆ ವಿಮಾ ತಜ್ಞನಿಗೆ ಭಾರತದ ಒಳಗೆ ಮತ್ತು ಹೊರಗೆ ಎರಡೂ ಕಡೆಗಳಲ್ಲಿ ಪಾಲುದಾರಿಕೆಯ ವ್ಯವಹಾರದ ಫೀಜುಗಳಲ್ಲಿ ಅಥವಾ ಲಾಭಗಳಲ್ಲಿ ಪಾಲು ಇರಬೇಕು; ಅಥವಾ

(4) ಅಂಥ ವಿಮಾ ತಜ್ಞನ ನೌಕರನಾಗಿಲ್ಲದ ಅಥವಾ ಅವನ ಪಾಲುದಾರನಾಗಲು ಅರ್ಹನಾಗಿಲ್ಲದ ವ್ಯಕ್ತಿಯ ಸೇವೆಗಳ ಮೂಲಕವಾಗಿಯಾಗಲಿ ಅಥವಾ ವಿಮಾ ತಜ್ಞನಿಗೆ ಅವಕಾಶವಿಲ್ಲದ ಸಾಧನಗಳ ಮೂಲಕವಾಗಿಯಾಗಲಿ, ಯಾವುದೇ ವೃತ್ತಿ ಸಂಬಂಧಿತ ವ್ಯವಹಾರವನ್ನು ಪಡೆದುಕೊಂಡರೆ; ಅಥವಾ

(5) ಈ ಹಿಂದೆ ಬೇರೊಬ್ಬ ವಿಮಾ ತಜ್ಞನು ಹೊಂದಿದ ಕೆಲಸವನ್ನು ಲಿಖಿತದಲ್ಲಿ ಅವನನ್ನು ಮೊದಲು ಸಂಪರ್ಕಿಸದೆಯೇ ವಿಮಾ ತಜ್ಞನಾಗಿ ಆ ಕೆಲಸವನ್ನು ಒಪ್ಪಿಕೊಂಡರೆ; ಅಥವಾ

(6) ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ವಿನಿಯಮನದ ಮೇರೆಗೆ ಅನುಮತಿಸಲಾದಂತೆ ಹೊರತು, ಶೇಕಡಾವಾರು ಲಾಭದ ಮೇಲೆ ಆಧಾರಿತವಾದ ಅಥವಾ ಅಂಥ ನಿಯೋಜನೆಯ ನಿರ್ಣಯಗಳನ್ನು ಅಥವಾ ಫಲಿತಾಂಶಗಳನ್ನು ಅವಲಂಬಿಸಿದ ಯಾವುದೇ ವೃತ್ತೀಯ ನಿಯೋಜನೆಯ ಸಂಬಂಧದಲ್ಲಿ, ಆ ಫೀಜುಗಳನ್ನು ವಿಧಿಸಿದರೆ ಅಥವಾ ವಿಧಿಸಲು ಪ್ರಸ್ತಾವಿಸಿದರೆ, ಅಂಗೀಕರಿಸಿದರೆ ಅಥವಾ ಅಂಗೀಕರಿಸಲು ಪ್ರಸ್ತಾವಿಸಿದರೆ; ಅಥವಾ

(7) ವಿಮಾ ತಜ್ಞರ ವೃತ್ತಿಗಳನ್ನು ಹೊರತುಪಡಿಸಿ ಯಾವುದೇ ವ್ಯವಹಾರದಲ್ಲಿ ಅಥವಾ ವೃತ್ತಿಯಲ್ಲಿ, ಹಾಗೆ ತೊಡಗಲು ಪರಿಷತ್ತು ಅನುಮತಿಸಿದ ಹೊರತು, ತೊಡಗಿದರೆ:

ಪರಂತು, ಇಲ್ಲಿ ಒಳಗೊಂಡಿರುವುದು ಯಾವುದೂ, ವಿಮಾ ತಜ್ಞನನ್ನು ಕಂಪನಿಯ ನಿರ್ದೇಶಕನಾಗುವುದಕ್ಕೆ ಅನರ್ಹಗೊಳಿಸತಕ್ಕದ್ದಲ್ಲ; ಅಥವಾ

(8) ವೃತ್ತಿ ನಡೆಸುತ್ತಿರುವ ಬೇರೆ ಯಾರೇ ವಿಮಾ ತಜ್ಞನು ಹಿಂದೆ ಹೊಂದಿದ್ದ ಸ್ಥಾನವನ್ನು, ಆ ಸ್ಥಾನಮಾನದ ಷರತ್ತುಗಳನ್ನು ಮೊಟಕುಗೊಳಿಸಿ ವಿಮಾ ತಜ್ಞನಾಗಿ ಒಪ್ಪಿಕೊಂಡರೆ; ಅಥವಾ

(9) ಯಾವುದೇ ಮೌಲ್ಯ ನಿರ್ಣಯ ವರದಿಗೆ ಅಥವಾ ಹಣಕಾಸು ವಿವರಪಟ್ಟಿಗೆ ತನ್ನ ಪರವಾಗಿ ಅಥವಾ ತನ್ನ ಫರ್ಮಿನ ಪರವಾಗಿ ಸಹಿ ಹಾಕಲು ವೃತ್ತಿ ನಡೆಸುತ್ತಿರುವ ಸಂಸ್ಥೆಯ ಸದಸ್ಯನಲ್ಲದ ವ್ಯಕ್ತಿಗೆ ಅಥವಾ ತನ್ನ ಪಾಲುದಾರನಲ್ಲದ ಸದಸ್ಯನಿಗೆ ಅವಕಾಶ ನೀಡಿದರೆ; ಅಥವಾ

(10) ವೃತ್ತಿ ಸಂಬಂಧೀ ಕಾರ್ಯದಲ್ಲಿ ತೊಡಗಿರುವಾಗ ಪಡೆದುಕೊಂಡ ಮಾಹಿತಿಯನ್ನು, ಅಂಥ ಕಕ್ಷಿದಾರನ ಸಮ್ಮತಿಯಿಲ್ಲದೆ ಹಾಗೆ ಅವನನ್ನು ತೊಡಗಿಸಿದ ಅವನ ಕಕ್ಷಿದಾರನನ್ನು ಹೊರತುಪಡಿಸಿ ಇತರ ಯಾರೇ ವ್ಯಕ್ತಿಗೆ, ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಗತ್ಯಪಡಿಸಿದಂತೆ ಹೊರತು ಅನ್ಯಥಾ ಬಹಿರಂಗಪಡಿಸಿದರೆ; ಅಥವಾ

(11) ಮೌಲ್ಯ ನಿರ್ಣಯ ವರದಿಯನ್ನು ಅಥವಾ ಹಣಕಾಸು ವಿವರ ಪಟ್ಟಿಯನ್ನು, ಅಂಥ ವಿವರ ಪಟ್ಟಿಯ ಮತ್ತು ಸಂಬಂಧಪಟ್ಟ ದಾಖಲೆಗಳ ಪರಿಶೀಲನೆಯನ್ನು ಅವನು ಅಥವಾ ಅವನ ಪಾಲುದಾರನು ಅಥವಾ ಅವನ ಫರ್ಮಿನಲ್ಲಿರುವ ನೌಕರನು ಅಥವಾ ವೃತ್ತಿ ನಡೆಸುತ್ತಿರುವ ಮತ್ತೊಬ್ಬ ವಿಮಾ ತಜ್ಞನು ಮಾಡಿದ ಹೊರತು, ಅವನ ಹೆಸರಿನಲ್ಲಿ ಅಥವಾ ಅವನ ಫರ್ಮಿನ ಹೆಸರಿನಲ್ಲಿ ಪ್ರಮಾಣೀಕರಿಸಿದರೆ ಅಥವಾ ಸಲ್ಲಿಸಿದರೆ; ಅಥವಾ

(12) ಅವನು, ಅವನ ಫರ್ಮು ಅಥವಾ ಅವನ ಫರ್ಮಿನ ಪಾಲುದಾರನು ಯಾವುದರಲ್ಲಿ ಗಣನೀಯ ಹಿತಾಸಕ್ತಿಯುಳ್ಳವನಾಗಿರುವನೋ ಆ ಯಾವುದೇ ವ್ಯವಹಾರದ ಅಥವಾ ಯಾವುದೇ ಉದ್ಯಮದ ಮೌಲ್ಯ ನಿರ್ಣಯ ವರದಿಗಳ ಅಥವಾ ಹಣಕಾಸು ವಿವರಪಟ್ಟಿಯ ಬಗ್ಗೆ ಅವನ ಅಭಿಪ್ರಾಯವನ್ನು, ಅವನ ವರದಿಯಲ್ಲಿ ಆ ಹಿತಾಸಕ್ತಿಯನ್ನು ಬಹಿರಂಗಪಡಿಸಿದ ಹೊರತು ವ್ಯಕ್ತಪಡಿಸಿದರೆ; ಅಥವಾ

(13) ತನ್ನ ವೃತ್ತೀಯ ಸಾಮರ್ಥ್ಯದಲ್ಲಿ ಅಂಥ ಮೌಲ್ಯ ನಿರ್ಣಯದ ವರದಿ ಅಥವಾ ಹಣಕಾಸು ವಿವರ ಪಟ್ಟಿಯೊಂದಿಗೆ ಅವನು ಸಂಬಂಧ ಹೊಂದಿರುವಲ್ಲಿ, ತಪ್ಪುದಾರಿಗೆಳೆಯುವಂಥದ್ದಾಗಿರದ ಆ ಮೌಲ್ಯ ನಿರ್ಣಯ ವರದಿಯನ್ನು ಅಥವಾ ಹಣಕಾಸು ವಿವರಪಟ್ಟಿಯನ್ನು ಸಲ್ಲಿಸಲು, ಯಾವ ಮಹತ್ವದ ಸಂಗತಿಯನ್ನು ಬಹಿರಂಗಪಡಿಸುವುದು ಅವಶ್ಯಕವಾಗಿದೆಯೋ ಅದನ್ನು ತನಗೆ ಗೊತ್ತಿದ್ದೂ ಮೌಲ್ಯ ನಿರ್ಣಯ ವರದಿಯಲ್ಲಿ ಅಥವಾ ಹಣಕಾಸು ವಿವರ ಪಟ್ಟಿಯಲ್ಲಿ ಬಹಿರಂಗ ಪಡಿಸಲು ವಿಫಲನಾದರೆ; ಅಥವಾ

(14) ಅವನು ತನ್ನ ವೃತ್ತೀಯ ಸಾಮರ್ಥ್ಯಕ್ಕೆ ಸಂಬಂಧಪಡುವ ಮೌಲ್ಯ ನಿರ್ಣಯ ವರದಿಯಲ್ಲಿ ಅಥವಾ ಹಣಕಾಸು ವಿವರ ಪಟ್ಟಿಯಲ್ಲಿ ಕಂಡು ಬರುವ ಮಹತ್ವದ ತಪ್ಪು ಹೇಳಿಕೆ ತನಗೆ ತಿಳಿದಿದ್ದರೂ ಅದನ್ನು ವರದಿ ಮಾಡಲು ವಿಫಲನಾದರೆ; ಅಥವಾ

(15) ಅವನ ವೃತ್ತೀಯ ಕರ್ತವ್ಯಗಳನ್ನು ನೆರವೇರಿಸುವಲ್ಲಿ ತೀವ್ರ ನಿರ್ಲಕ್ಷ್ಯ ತೋರಿದರೆ; ಅಥವಾ

(16) ಅವನು ಅಥವಾ ಅವನ ಪರವಾಗಿ ಸಿದ್ಧಪಡಿಸಿದ ಯಾವುದೇ ಮೌಲ್ಯ ನಿರ್ಣಯ ವರದಿಯಲ್ಲಿ ಅಥವಾ ಹಣಕಾಸು ವಿವರ ಪಟ್ಟಿಯಲ್ಲಿ ಒಳಗೊಂಡ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಭಿಪ್ರಾಯ ರೂಪಿಸಿಕೊಳ್ಳಲು ಅಗತ್ಯವಾದ ಸಾಕಷ್ಟು ಮಾಹಿತಿಯನ್ನು ಪಡೆಯಲು ವಿಫಲನಾದರೆ; ಅಥವಾ

(17) ಅವನು ಅಥವಾ ಅವನ ಪರವಾಗಿ ಸಿದ್ಧಪಡಿಸಿದ ಯಾವುದೇ ಮೌಲ್ಯ ನಿರ್ಣಯ ವರದಿಯಲ್ಲಿ ಅಥವಾ ಹಣಕಾಸು ವಿವರ ಪಟ್ಟಿಯಲ್ಲಿ ಸಾಮಾನ್ಯವಾಗಿ ಅಂಗೀಕರಿಸಿದ ಕಾರ್ಯ ವಿಧಾನದಿಂದ ಅಥವಾ ಸಂದರ್ಭಗಳಿಗೆ ಅನ್ವಯವಾಗಬಹುದಾದ ವೃತ್ತಿ ಸಂಬಂಧಿ ಕಾರ್ಯದಿಂದ ಆದ ಯಾವುದೇ ಮುಖ್ಯ ಬದಲಾವಣೆಯ ಬಗ್ಗೆ ಗಮನ ಸೆಳೆಯಲು ವಿಫಲನಾದರೆ

– ಆತನನ್ನು ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

## ಭಾಗ –II

## ಸೇವಾ ನಿರತ ಸಂಸ್ಥೆಯ ಸದಸ್ಯರಿಗೆ ಸಂಬಂಧಿಸಿದ ವೃತ್ತೀಯ ದುರ್ನಡತೆ

ಸಂಸ್ಥೆಯ ಸದಸ್ಯನು (ವೃತ್ತಿ ನಡೆಸುತ್ತಿರುವ ಸದಸ್ಯನನ್ನು ಹೊರತುಪಡಿಸಿ) ಯಾವುದೇ ಕಂಪನಿಯ, ಫರ್ಮಿನ ಅಥವಾ ವ್ಯಕ್ತಿಯ ನೌಕರನಾಗಿದ್ದು, ಅವನು,–

(1) ತಾನು ಕೈಗೊಂಡಿರುವ ಉದ್ಯೋಗದ ಉಪಲಬ್ಧಿಗಳಲ್ಲಿ ಯಾವುದೇ ಪಾಲನ್ನು ಯಾರೇ ವ್ಯಕ್ತಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂದಾಯ ಮಾಡಿದರೆ ಅಥವಾ ಸಂದಾಯ ಮಾಡಲು ಅವಕಾಶ ನೀಡಿದರೆ ಅಥವಾ ಅದಕ್ಕೆ ಒಪ್ಪಿದರೆ; ಅಥವಾ

(2) ಫೀಜುಗಳ, ಲಾಭಗಳ ಅಥವಾ ಗಳಿಕೆಗಳ ಯಾವುದೇ ಭಾಗವನ್ನು ಕಮೀಷನ್ನಿನ ಅಥವಾ ಪರಿತೋಷದ ರೂಪದಲ್ಲಿ ಸ್ವೀಕರಿಸಿದರೆ ಅಥವಾ ಸ್ವೀಕರಿಸಲು ಒಪ್ಪಿದರೆ; ಅಥವಾ

(3) ಅವನ ಉದ್ಯೋಗದ ಕ್ರಮದಲ್ಲಿ ಪಡೆದುಕೊಂಡ ರಹಸ್ಯ ಮಾಹಿತಿಯನ್ನು ಕಾನೂನು ಅಗತ್ಯಪಡಿಸಿದಾಗಲೆಲ್ಲಾ ಹೊರತು ಅಥವಾ ಅವನ ನಿಯೋಜಕನು ಅನುಮತಿಸಿದಂತೆ ಹೊರತು ಬಹಿರಂಗಪಡಿಸಿದರೆ

– ಅವನನ್ನು ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

## ಭಾಗ –III

### ಸಾಮಾನ್ಯವಾಗಿ ಸಂಸ್ಥೆಯ ಸದಸ್ಯರಿಗೆ ಸಂಬಂಧಿಸಿದಂತೆ ವೃತ್ತೀಯ ದುರ್ನಡತೆ

ಸಂಸ್ಥೆಯ ಸದಸ್ಯನು, ಅವನು ವೃತ್ತಿ ನಡೆಸುತ್ತಿರಲಿ ಅಥವಾ ಇಲ್ಲದಿರಲಿ, ಅವನು,–

(1) ಪರಿಷತ್ತಿಗೆ ಒಪ್ಪಿಸಬೇಕಾದ ಯಾವುದೇ ಹೇಳಿಕೆಯಲ್ಲಿ, ವಿವರ ಪಟ್ಟಿಕೆಯಲ್ಲಿ ಅಥವಾ ನಮೂನೆಯಲ್ಲಿ, ಯಾವುವೇ ವಿವರಗಳು ಸುಳ್ಳೆಂದು ತಿಳಿದಿದ್ದೂ ಅವುಗಳನ್ನು ಸೇರಿಸಿದರೆ; ಅಥವಾ

(2) ಸಂಸ್ಥೆಯ ಅಧಿಸದಸ್ಯನಾಗಿರದೆ ಸಂಸ್ಥೆಯ ಅಧಿಸದಸ್ಯನಂತೆ ತಾನೇ ಕಾರ್ಯನಿರ್ವಹಿಸಿದರೆ; ಅಥವಾ

(3) ಪರಿಷತ್ತು ಅಥವಾ ಅದರ ಯಾವುದೇ ಸಮಿತಿಯು ಕೋರಿದ ಮಾಹಿತಿಯನ್ನು ಒದಗಿಸದಿದ್ದರೆ ಅಥವಾ ಕೇಳಲಾದ ಅಗತ್ಯತೆಗಳನ್ನು ಪಾಲಿಸದಿದ್ದರೆ; ಅಥವಾ

(4) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ವಿನಿಯಮನಗಳನ್ನು ಅಥವಾ 19ನೇ ಪ್ರಕರಣದ (2)ನೇ ಉಪಪ್ರಕರಣದ (i)ನೇ ಖಂಡದ ಮೇರೆಗೆ ಪರಿಷತ್ತು ನೀಡಿದ ಯಾವುವೇ ಮಾರ್ಗಸೂಚಿಗಳನ್ನು ಉಲ್ಲಂಘಿಸಿದರೆ; ಅಥವಾ

(5) ಪರಿಷತ್ತು ನಿರ್ದಿಷ್ಟಪಡಿಸಬಹುದಾದಂಥ ಇತರ ಕೃತ್ಯದ ಅಥವಾ ಲೋಪದ ತಪ್ಪಿತಸ್ಥನಾದರೆ

– ಅವನನ್ನು ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

## ಭಾಗ – IV

### ಸಾಮಾನ್ಯವಾಗಿ ಸಂಸ್ಥೆಯ ಸದಸ್ಯರಿಗೆ ಸಂಬಂಧಿಸಿದಂತೆ ಇತರ ದುರ್ನಡತೆ

ಸಂಸ್ಥೆಯ ಸದಸ್ಯನು, ವೃತ್ತಿ ನಡೆಸುತ್ತಿರಲಿ ಅಥವಾ ಇಲ್ಲದಿರಲಿ ಅವನು,–

(ಎ) (1) ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ನ್ಯಾಯಾಲಯದಿಂದ ಆರು ತಿಂಗಳುಗಳಿಗೆ ಮೀರದ ಅವಧಿಗೆ ಕಾರಾವಾಸದಿಂದ ದಂಡಿಸಬಹುದಾದ ಅಪರಾಧದ ತಪ್ಪಿತಸ್ಥನಾಗಿದ್ದರೆ;

(2) ಪರಿಷತ್ತಿನ ಅಭಿಪ್ರಾಯದಲ್ಲಿ, ಅವನ ವೃತ್ತೀಯ ಕಾರ್ಯಕ್ಕೆ ಸಂಬಂಧಿಸಿರಲಿ ಅಥವಾ ಇಲ್ಲದಿರಲಿ, ಅವನ ಕೃತ್ಯದ ಪರಿಣಾಮವಾಗಿ ಆ ವೃತ್ತಿಗೆ ಅಥವಾ ಸಂಸ್ಥೆಗೆ ಅವನು ಅಪಕೀರ್ತಿ ತಂದರೆ;

(ಬಿ) ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ನ್ಯಾಯಾಲಯದಿಂದ ಆರು ತಿಂಗಳುಗಳನ್ನು ಮೀರಿದ ಅವಧಿಗೆ ಕಾರಾವಾಸದಿಂದ ದಂಡನೀಯವಾಗಬಹುದಾದ ಅಪರಾಧದ ತಪ್ಪಿತಸ್ಥನಾಗಿದ್ದರೆ

– ಅವನನ್ನು ಇತರ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

* * *

Govt. Press, Bangalore, P7, W.D:283 , Copies: 150